
ಕಲ್ಯಾಣ ಕಿರಣ



ಬೆಲೆ : ೪ ರೂ.

1991

ನವಂಬರ್

ಕನ್ನಡ ರಾಜ್ಯೋತ್ಸವ

ಕಲ್ಯಾಣ ಕಿರಣ

ಮಾಸ ಪತ್ರಿಕೆ, ಬಿಡಿ ಸಂಚಿಕೆ ೩ ರೂ.

(ಅಕ್ಟೋಬರ್) ನವೆಂಬರ್ ೧೯೯೧,

ಸಂಪುಟ : 20 ಸಂಚಿಕೆ : 6-7 ಬಸವ ಶಕೆ : 886

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಕಿರಣಗನ್ನಡಿ

	ಲೇಖನಗಳು	ಲೇಖಕರು	ಪು.ಸಂಖ್ಯೆ
೧.	ಶರಣ ಮೇಳ	ಮಾತಾಜಿ	೧
೨.	ಸ್ನೇಹ ಸಂಗಮ		೨
೩.	ಜಾತಿ ಬೇಡ ಧರ್ಮ ಬೇಕು	ಕಲ್ಯಾಣಪ್ಪ ಪರವಾದಿ	೩
೪.	ಮುಡಿಪು	ಮಾತಾಜಿ	೪
೫.	ದೇವರ ಹೆಸರಿನಲ್ಲಿ ಪ್ರಾಣಿಬಲಿ ತಡೆಯುವಲ್ಲಿ ಅಪೂರ್ವ ಯಶಸ್ಸು	ನಿಜಗುಣಾನಂದ ಸ್ವಾಮಿ	೫
೬.	ಶರಣ ಮೇಳ ಕುರಿತು ಪರಿಚಯ	ಮಾತಾಜಿ	೧೦
೭.	ಭಾವ ಸಂಗಮ	ರಾ. ಬ. ದ ಬೆಂ	೨೨
೮.	1992 ನೇ ಸಾಲಿನ ಹಬ್ಬ-ಹುಣ್ಣಿಮೆಗಳು ಜನ್ಮದಿನೋತ್ಸವಗಳು		೨೩

.... ವಿಶೇಷ ಸೂಚನೆ ....

ಶರಣ ಮೇಳಕ್ಕೆ ಬರುವಾಗ, ವಿವಾಹವಾಗತಿರುವ ಮಕ್ಕಳಿರುವ ಪಾಲಕರು-ಪೋಷಕರು ಅಭ್ಯರ್ಥಿಗಳ ಪಾಸ್ ಪೋರ್ಟ್ ಸೈಜ್ ಪೋಟೋ ತಂದು, ಅಲ್ಲೇ ಅರ್ಜಿ ಫಾರಂ ಪಡೆದು ಅರ್ಜಿಯನ್ನು ನೋಂದಾಯಿಸ ಬಹುದು. ಈ ಕಾರ್ಯನಿಮಿತ್ತ ಒಂದು ಕೌಂಟರನ್ನು ತೆರೆಯ ಲಾಗುವುದು.

ಕಲ್ಯಾಣ ಕಿರಣ

ಸಂಪುಟ : 20 ಸಂಚಿಕೆ : 6-7 ಅಕ್ಟೋಬರ್-ನವಂಬರ 1991 ಬಸವ ಶಕೆ 886

— ಶರಣ ಮೇಳ —

ಬನ್ನಿ ಬನ್ನಿ ನೋಡ ಬನ್ನಿ ಸಂಗಮದ ಕ್ಷೇತ್ರವ
ಬನ್ನಿ ಬನ್ನಿ ನೋಡ ಬನ್ನಿ ಶರಣ ಮೇಳವ ॥ ಪಲ್ಲವಿ ॥

ದೇವ ಸಂಗಮೇಶನ ದಿವ್ಯತಾಣ ಸಂಗಮ
ಮಲಪ್ರಭೆ ಕೃಷ್ಣೆಯರು ಸೇರುತಿರುವ ಸಂಗಮ
ಮಹಾಮನೆಯ ಹೊಂದಿರುವ ಭವ್ಯಕ್ಷೇತ್ರ ಸಂಗಮ
ಶರಣ ಮೇಳ ನಡೆಯುತಿರುವ ಧರ್ಮಕ್ಷೇತ್ರ ಸಂಗಮ ॥೧॥

ಬಸವ ಕ್ರಾಂತಿ ದಿವ್ಯದಿನದಿ ನಡೆಯುತಿದೆ ಶರಣ ಮೇಳ
ನಾಡ ಮೂಲೆ ಮೂಲೆಯಿಂದ ಸೇರುತಿದೆ ಶರಣ ಬಳಗ
ನಮ್ಮ ನಿಮ್ಮ ಬಾಳಿನ ಬನ್ನವನ್ನು ಕಳೆಯುವ
ವಚನ ಮೇಳ ತತ್ತ್ವ ಮೇಳ ಕಮ್ಮನೆಯ ಶರಣ ಮೇಳ ॥೨॥

ತಮಿಳುನಾಡು ತೆಲುಗುನಾಡು ಮಹಾರಾಷ್ಟ್ರ ಹಿಂದಿನಾಡು
ಕರುನಾಡಿನ ಮೂಲೆಯಿಂದ ಬರುತಿಹರು ಸಂಗಮಕೆ
ಬಸವ ಲತೆಯು ಅರಳಿಸಿರುವ ಭಕ್ತ ಸುಮಗಳಿವರ ನೋಡಿ
ಮಾಲೆ ಮಾಡಿ ಇಟ್ಟಿದೆ ಸಂಗಮದ ಶರಣ ಮೇಳ ॥೩॥

—ಜಗದ್ಗುರು ಮಾತೆ ಮಹಾದೇವಿ



ಸ್ನೇಹ ಸಂಗಮ

ಬೆಂಗಳೂರಿನ ರಾಷ್ಟ್ರೀಯ ಬಸವ ದಳದವರು "ಭಾವ ಸಂಗಮ" ಎಂಬ ವಧೂವರರ ಹೊಂದಾಣಿಕೆ ಕೇಂದ್ರವನ್ನು ಆರಂಭಿಸಿರುವ ಬಗ್ಗೆ ಇದೇ ಸಂಚಿಕೆಯಲ್ಲಿ ಪ್ರಕಟಣೆ ನೀಡಲಾಗಿದೆಯಷ್ಟೆ. ಈ ಬಗ್ಗೆ ಇನ್ನೊಂದು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶರಣ ಮೇಳದಲ್ಲಿ ಅನಾಯಾಸವಾಗಿ ಶರಣ ಬಂಧುಗಳು ಸೇರುತ್ತಾರೆ. "ಭಾವ ಸಂಗಮ"ದ ಮೂಲಕ ವಿವಾಹ ಸಂಬಂಧ ಕುದುರಿಸಿಕೊಳ್ಳಬೇಕೆನ್ನುವವರಿಗಾಗಿ 15-1-1992 ರ ಸಂಜೆ 6 ಗಂಟೆಗೆ ಒಂದು ಕಾರ್ಯಕ್ರಮ ಯೋಜಿಸಲಾಗಿದೆ. ಪಾಲಕರು ವಿವಾಹವಾಗಲಿರುವ ತಮ್ಮ ಮಕ್ಕಳನ್ನು ಕರೆದುಕೊಂಡು ಬಂದರೆ, ಸ್ನೇಹ ಸಂಗಮದ ಮುಖಾಂತರ ಪರಸ್ಪರ ಪರಿಚಯಿಸಲಾಗುವುದು.

ಈ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕೆನ್ನುವವರು ಪತ್ರ ಮೂಲಕ ವ್ಯವಹರಿಸಿ 5 ರೂ. ಎಂ.ಓ. ಮಾಡಿ, ಅರ್ಜಿಪತ್ರ ತರಿಸಿಕೊಂಡು ಪೂರ್ಣ ವಿವರ ತುಂಬಿ 50 ರೂ. ಕೊಟ್ಟು ನೋಂದಾಯಿಸಿ, ಕೂಡಲ ಸಂಗಮದಲ್ಲಿ ಜರುಗುವ ಸ್ನೇಹ ಸಂಗಮದಲ್ಲಿ ಭಾಗಿಯಾಗಬಹುದು.

ಅಥವಾ 12-1-92 ರಂದು ಅಲ್ಲಿಗೆ ಬಂದಾಗ ಫಾರ್ಮ ತುಂಬಿಕೊಟ್ಟು ನೋಂದಾಯಿಸಿ, 15-1-92ರ ಸಂಜೆ ನಡೆಯುವ ಸ್ನೇಹ ಸಂಗಮದಲ್ಲಿ ಭಾಗಿಯಾಗುವುದಾಗಿ ತಿಳಿಸಬಹುದು.

ವಿಶೇಷ ಸೂಚನೆ : 12 ರಿಂದ 15 ದಿವಸಗಳವರೆಗೆ ಪ್ರತಿನಿಧಿ ಶುಲ್ಕ ಅಥವಾ ಅದಕ್ಕೂ ಮೇಲಿನ ದೇಣಿಗೆ ಸಲ್ಲಿಸುವವರು ಶರಣ ಮೇಳ ಉತ್ಸವ ಸಮಿತಿಗೆ ಸಲ್ಲಿಸಬೇಕು. "ಭಾವ ಸಂಗಮ"ಕ್ಕೆ ಕಟ್ಟುವ ನೋಂದಾವಣೆ ಶುಲ್ಕ ರಾಷ್ಟ್ರೀಯ ಬಸವ ದಳಕ್ಕೆ ಸಂಬಂಧಿಸಿದ್ದು.

ಸ್ವಯಂ ಸೇವಕರಿಗೆ ಸೂಚನೆ

1992ರ ಜನವರಿ 12, 13, 14, 15ರಂದು ನಡೆಯುವ ಶರಣ ಮೇಳದಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡಲು ಬರುವವರು ಮತ್ತು 15ದಿವಸಗಳ ಮೊದಲೇ ಬಂದು ಕೆಲಸಕಾರ್ಯ ಮಾಡುವವರು, ಆದಷ್ಟು ಬೇಗನೆ ಪತ್ರ ಬರೆದು ತಿಳಿಸಬೇಕು. ಮತ್ತು ಬೇಗನೆ ಸಂಗಮಕ್ಕೆ ಬರಬೇಕು.

ಶರಣ ಮೇಳ ಉತ್ಸವ ಸಮಿತಿ.



"ಜಾತಿ ಬೇಡ ಧರ್ಮ ಬೇಕು"

ಹುಬ್ಬಳ್ಳಿ 11 : ಜಗತ್ತಿನಲ್ಲಿ ವ್ಯಕ್ತಿಗಳ ನಡುವಿನ ವಿಭಜನೆ ದೂರವಾಗಿ ಶಾಂತಿ ಸಮಾಧಾನಗಳು ನೆಲೆಸಬೇಕಾದರೆ ಜಾತಿಗಳು ಬೇಡ ಆದರೆ ಧರ್ಮ ಅವಶ್ಯವಾಗಿ ಬೇಕೆಂದು ಇಂದು ಇಲ್ಲಿ ವಿಶ್ವಧರ್ಮ ಪ್ರವಚನ ಪ್ರಾರಂಭಿಸುತ್ತ ಬಸವ ಧರ್ಮ ಪೀಠಾಧ್ಯಕ್ಷ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳು ಅಪ್ಪಣೆ ಕೊಡಿಸಿದರು.

ಮೂವತ್ತು ವರ್ಷಗಳ ನಂತರ ಹುಬ್ಬಳ್ಳಿ ನಗರಕ್ಕೆ ಪ್ರವಚನಕ್ಕಾಗಿ ಆಗಮಿಸಿದ ಪೂಜ್ಯ ಶ್ರೀ ಸ್ವಾಮೀಜಿ ಅವರನ್ನು ರಾಷ್ಟ್ರೀಯ ಬಸವ ದಳದ ಕಾರ್ಯಕರ್ತೆಯರು ಆರತಿ-ಬೆಳಗಿ ಸ್ವಾಗತಿಸಿದರು. ಬಸವಕುಮಾರಿಯರಾದ ಮಲ್ಲಮ್ಮ, ಅಕ್ಕಮಹಾದೇವಿ, ಶೋಭಾದೇವಿ ಪರಮಾದಿ ಅವರಿಂದ ಪ್ರಾರ್ಥನೆಯಾಯಿತು.

ವಿಶ್ವಧರ್ಮ ಪ್ರವಚನ ಸಮಿತಿಯವರು ಏರ್ಪಡಿಸಿದ ಕಾರ್ಯಕ್ರಮದ ಉದ್ಘಾಟನೆಯನ್ನು ಹುಬ್ಬಳ್ಳಿ-ಧಾರವಾಡ ಮಹಾನಗರದ ಆಯುಕ್ತ ಶ್ರೀ ಎಸ್. ಜಿ. ತಿರ್ಲಾಪೂರ ಅವರು ಜ್ಯೋತಿ ಬೆಳಗಿ ಉದ್ಘಾಟಿಸಿ, ಅಧರ್ಮ ಹೆಚ್ಚಾಗಿ ಎಲ್ಲಕಡೆಗೆ ಅಶಾಂತಿ ತುಂಬಿದ ಇಂದಿನ ಸನ್ನಿವೇಶದಲ್ಲಿ ಧರ್ಮ ಜಾಗೃತಿ ಹೆಚ್ಚು ಹೆಚ್ಚಾಗಿ ಅಗಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹುಬ್ಬಳ್ಳಿ-ಧಾರವಾಡ ಉಪಮಹಾಪೌರರಾದ ಶ್ರೀಮತಿ ಎಲ್ಲಮ್ಮ ಉಗರಗೋಳ ಅವರು ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು. ಅವರು ಪೂಜ್ಯ ಸ್ವಾಮೀಜಿ ಅವರ ಧರ್ಮ ಬೋಧೆಯಿಂದ ಇಲ್ಲಿ ಸುಖ ಶಾಂತಿಗಳು ನೆಲೆಸುವಂತಾಗಲಿ ಎಂದು ಹೇಳಿದರು.

ಪೂಜ್ಯ ಶ್ರೀ ಸ್ವಾಮೀಜಿ ಅವರು ತಮ್ಮ ಆಶೀರ್ವಚನದಲ್ಲಿ ವಿಶ್ವಧರ್ಮ ಪ್ರವಚನವು ಎಲ್ಲರ ಕಲ್ಯಾಣಕ್ಕಾಗಿ ಹಮ್ಮಿಕೊಂಡ ಕಾರ್ಯಕ್ರಮವಾಗಿದ್ದು ಎಲ್ಲ ಮಾನವೀಯ ಹಾಗೂ ಧಾರ್ಮಿಕ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ ಎಂದು ತಿಳಿಸಿದರು. ಮಾರ್ಗದಲ್ಲಿ ಮನುಷ್ಯರು ಎಡವದಂತೆ ನೆರವಾಗುವ ಕೈದೀವಿಗೆಯಂತೆ ವಿಶ್ವಧರ್ಮ ಪ್ರವಚನವು ಬಾಳಪಥದಲ್ಲಿ ಮಾನವರಿಗೆ ನೆರವಾಗಲಿ ಎಂದು ಹಾರೈಸಿದರು.

ಪ್ರಾರಂಭದಲ್ಲಿ ಮಾಜಿ ಮೇಯರ್, ಸಮಾಜ ನೇತಾರ ಶ್ರೀ ಎಸ್.ಎಸ್. ಶೆಟ್ಟರ ವಕೀಲರು ಸ್ವಾಗತ ಮಾಡಿದರು. ಶರಣೆ ಚಂದ್ರಮ್ಮ ಸದಾನಂದ ಸ್ವಾಮಿ ಅವರು ಪರಿಚಯ ಮಾಡಿಕೊಟ್ಟರು. ಶರಣ ಕಲ್ಯಾಣಪ್ಪ ಪರಮಾದಿ ವಂದನಾರ್ಪಣೆ ಮಾಡಿದರು. ಶರಣ ಚನ್ನಬಸವಾನಂದರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ರಾಷ್ಟ್ರೀಯ ಬಸವ ದಳ ಹುಬ್ಬಳ್ಳಿ-ಧಾರವಾಧ ಘಟಕಗಳ ಕಾರ್ಯಾಧ್ಯಕ್ಷರು ಹಾಗೂ ಸಾರ್ವಜನಿಕರು ಮಾಲಾರ್ಪಣೆ ಮಾಡಿ ಫಲಪುಷ್ಪ ಅರ್ಪಿಸಿದರು.

ಬಹುದಿನಗಳಿಂದ ಇಲ್ಲಿನ ಜನತೆ ನಿರೀಕ್ಷೆ ಮಾಡುತ್ತಿದ್ದ ಈ ಪ್ರವಚನ ಕಾರ್ಯಕ್ರಮವು 1992 ನೇ ಇಸ್ವಿ ಜನವರಿ 3ರ ವರೆಗೆ ಮುಂದುವರಿಯಲಿದೆ.

ಕಲ್ಯಾಣಪ್ಪ ಪರಮಾದಿ
ಕಾರ್ಯಾಧ್ಯಕ್ಷ, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ, ಹಾಗೂ ಕಾರ್ಯದರ್ಶಿ ವಿಶ್ವಧರ್ಮ ಪ್ರವಚನ

ಮುಡಿಪು

ಶರಣ ಮೇಳಕ್ಕಾಗಿ :

ಪ್ರತಿವರ್ಷವೂ ಬಸವ ಕ್ರಾಂತಿ ದಿನದಂದು (ಮಕರ ಸಂಕ್ರಾಂತಿ) ನಡೆಯುವ ಶರಣ ಮೇಳದಲ್ಲಿ ಭಾಗಿಗಳಾಗುವುದು ಎಲ್ಲರ ಆದ್ಯ ಕರ್ತವ್ಯ ಎಂದು ಭಾವಿಸಬೇಕು. ಮುಸ್ಲೀಮರಿಗೆ ಮೆಕ್ಕ, ಕ್ರೈಸ್ತರಿಗೆ ಜೆರೊಸಲೆಮ್, ಬೌದ್ಧರಿಗೆ ಗಯೆ, ಸಿಖ್ಖರಿಗೆ ಅಮೃತಸರ ಪವಿತ್ರ ಧರ್ಮಕ್ಷೇತ್ರವಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಕೂಡಲ ಸಂಗಮವೇ ಧರ್ಮಕ್ಷೇತ್ರ. ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಭೂಮಿ, ಐಕ್ಯಸ್ಥಾನ ಕೂಡಲ ಸಂಗಮದಲ್ಲಿ ವರ್ಷಕ್ಕೊಮ್ಮೆ ಬಸವ ತತ್ತ್ವಾನುಯಾಯಿಗಳು ಸೇರಲೆಂದೇ ರೂಪುಗೊಂಡಿದೆ ಚಾರಿತ್ರಿಕ ಶರಣ ಮೇಳ. ಪ್ರತಿಯೊಬ್ಬರೂ ಬರಲು ಆರ್ಥಿಕ ಅನುಕೂಲವಾಗಲೆಂದು ಈಗಿನಿಂದಲೇ "ಶರಣ ಮೇಳ"ಕ್ಕಾಗಿ ಮುಡಿಪು ತೆಗೆದಿಡಿ. ನೀವು ಬಂದು ಭಾಗಿಗಳಾಗಲು ಈ ನಿಧಿ ಸಹಕಾರಿಯಾಗುತ್ತದೆ. ಆಕಸ್ಮಾತ್ ನಿಮಗೆ ಬರಲು ಆಗದಿದ್ದರೂ ನಿಮ್ಮ ಕೊಡುಗೆಯನ್ನು ಕಳಿಸಿಕೊಟ್ಟು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಲು ಸಾಧ್ಯವಾಗುತ್ತದೆ.

ಬಸವ ಧರ್ಮ ಪೀಠಕ್ಕಾಗಿ :

ಬಸವ ಧರ್ಮ ಪೀಠ ಎಂಬ ಹೆಸರಿನ ಟ್ರಸ್ಟ್ ಕೂಡಲ ಸಂಗಮದಲ್ಲಿ ಸ್ಥಾಪನೆಯಾಗಿದ್ದು, ಅದರ ವತಿಯಿಂದ ಸುಮಾರು ಒಂಭತ್ತೂವರೆ ಎಕರೆ ಜಮೀನನ್ನು ಖರೀದಿಸಲಾಗಿದೆ. ಈಗಾಗಲೇ ಅಲ್ಲಿ ಕಾರ್ಯಾಲಯಕ್ಕಾಗಿ ಒಂದು ಕಟ್ಟಡ ಹೊಂದಲಾಗಿದ್ದು, ಜಲಶೇಖರಣಾ ತೊಟ್ಟಿ ರಚನೆಯಾಗಿದೆ. ತಾತ್ಕಾಲಿಕವಾಗಿ ತೆಂಗಿನಗರಿಯ ಶೆಡ್ಡು ನಿರ್ಮಾಣಮಾಡಲಾಗಿದೆಯಾದರೂ ಶಾಶ್ವತ ಕಟ್ಟಡಗಳನ್ನು ಕಟ್ಟುವ ಯೋಜನೆ ಆರಂಭವಾಗಿದೆ. ದಾಸೋಹ ನಿಲಯ ವಸತಿ ಗೃಹ ಬಸವೇಶ್ವರ ಪೂಜಾ ಮಂಟಪ ಮುಂತಾದವು ಈಗ ಕೈಗೆ ಎತ್ತಿಕೊಂಡ ಯೋಜನೆಗಳು. ಇವುಗಳ ಪೂರೈಕೆಗಾಗಿ ಸಹೃದಯರು ತನು ಮನ ಧನಗಳಿಂದ ನೆರವು ನೀಡಬೇಕೆಂದು ಕೋರುತ್ತೇವೆ. ವ್ಯವಹರಿಸುವವರು ಎರಡರಲ್ಲಿ ಒಂದು ವಿಳಾಸಕ್ಕೆ ಬರೆಯಿರಿ.

ಕೇಂದ್ರ ಕಾರ್ಯಾಲಯ :
ಬಸವ ಧರ್ಮ ಪೀಠ
ಮಹಾಮನೆ ಆವರಣ
ಕೂಡಲ ಸಂಗಮ-587115
ತಾ- ಹುನಗುಂದ, ಜಿ- ಬಿಜಾಪುರ

ಶಾಖೆಯ ಕಾರ್ಯಾಲಯ :
ಬಸವ ಧರ್ಮ ಪೀಠ
ಬಸವ ಮಂಟಪ, 2035, 2ನೇ ಬ್ಲಾಕ್
ಕಾರ್ಡ್ ರಸ್ತೆ, ರಾಜಾಜಿನಗರ
ಬೆಂಗಳೂರು-560010

ದೇವರ ಹೆಸರಿನಲ್ಲಿ ಪ್ರಾಣಿಬಲಿ ತಡೆಯುವಲ್ಲಿ ಅಪೂರ್ವ ಯಶಸ್ಸು

ಲೇಖಕರು : **ನಿಜಗುಣಾನಂದ ಸ್ವಾಮಿ**

[ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ತಾಲ್ಲೋಕು ದೊಡ್ಡರಾಮಪುರದಲ್ಲಿ ಅಕ್ಟೋಬರ್ 30 ರಂದು ಬಲಿಯಾಗುತ್ತಿದ್ದ, ಮಾರಿ ದೇವತೆಗೆ ಹರಸಲ್ಪಟ್ಟಿದ್ದ, ಮೂಕ ಪ್ರಾಣಿಗಳಾದ ಕೋಣ, ಕುರಿ ಮತ್ತು ಕೋಳಿಗಳ ಪ್ರಾಣವು ಹರಣವಾಗದಂತೆ ತಡೆಯುವಲ್ಲಿ ರಾಷ್ಟ್ರೀಯ ಬಸವ ದಳಗಳವರು ಯಶಸ್ವಿಯಾದರು. ಈ ಕಳಕಳಿಯ ಪ್ರಯತ್ನದ ವಿವರವಿಲ್ಲಿದೆ.]

ಬೆಂಗಳೂರು ನಗರದಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿರುವ ಬಸವ ಗಂಗೋತ್ರಿಯಲ್ಲಿ ರಾಷ್ಟ್ರೀಯ ಬಸವ ದಳದ ವಿವಿಧ ಶಾಖೆಗಳ ಪದಾಧಿಕಾರಿಗಳ ಸಮಾವೇಶ ಸೇರಿತ್ತು. ದಿ. 26 ರಂದು ನಡೆದ ವಾರ್ಷಿಕ ಸಮಾವೇಶಕ್ಕೆ ಪೂಜ್ಯ ಶ್ರೀ ದಯಾನಂದ ಸ್ವಾಮಿಗಳು ಆಗಮಿಸಿ, ಪತ್ರಿಕೆಯ ಭಾಗವೊಂದನ್ನು ಸಭೆಗೆ ತೋರಿಸಿದರು. "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯು ಆಕ್ಟೋಬರ್ 6ರಂದು ಅತ್ಯಂತ ಭೀಭತ್ಸವಾದ ಭಾವಚಿತ್ರಗಳೊಡನೆ ಮಾರಿಜಾತ್ರೆಯ ವಿವರಗಳನ್ನು ಕೊಟ್ಟಿತ್ತು. ಒಂದು ಕಡೆ ಕಡಿಯಲ್ಪಟ್ಟು ರಾಶಿ ಬಿದ್ದಿರುವ ಕೋಣಗಳ ತಲೆ ; ತನ್ನ ಸ್ವಜಾತಿಯ ಪ್ರಾಣಿಗಳಿಗಾದ ದುರಂತ ಕಂಡು ದಿಗ್ಭ್ರಾಂತಗೊಂಡು ಜೀವ ಭಯದಿಂದ ಜಗ್ಗಾಡುವ ಕೋಣವನ್ನು ಹಗ್ಗಗಳಿಂದ ಬಿಗಿದು ಎಳೆತರುತ್ತಿರುವ ಮಾರಿಭಕ್ತರು ಇನ್ನೊಂದು ಕಡೆ. ಇನ್ನೂ ಸೋಜಿಗವೆಂದರೆ ಮಾಜಿ ಸಚಿವರಾದ ಬಸವಯ್ಯನವರು ಯಾವುದೋ ಉದಾತ್ತ ಸಾಹಸಕ್ಕೆ ಅಣಿಯಾದಂತೆ ಕತ್ತಿಯನ್ನು ಹಿಡಿದು ನಿಂತಿರುವ ಇನ್ನೊಂದು ಫೋಟೋ. ಈ ಚಿತ್ರ ಮತ್ತು ವಿವರಣೆ ನೋಡುತ್ತಲೇ ನಾವು 20ನೆಯ ಶತಮಾನದಲ್ಲಿದ್ದೇವೆಯೋ ಅಥವಾ ಶಿಲಾಯುಗದಲ್ಲಿದ್ದೇವೆಯೊ ಎನ್ನುವ ಭಾವ ಹಲವರಿಗೆ ಉಂಟಾಗದಿರಲಿಲ್ಲ.

ಈ ಭೀಭತ್ಸ ಪ್ರಸಂಗ ನಡೆದುದು ಅಕ್ಟೋಬರ 2 ರಂದು; ತುಮಕೂರು ಜಿಲ್ಲೆಯ ಚಿಕ್ಕನಾಯ್ಕನ ಹಳ್ಳಿ ತಾಲ್ಲೋಕು ದೊಡ್ಡರಾಮಪುರದಲ್ಲಿ; ವಿಪರ್ಯಾಸಗಳ ತವರಾದ ಭಾರತ ಭೂಮಿಯಲ್ಲಿ. ಅಹಿಂಸಾವಾದಿಯಾದ ಪೂಜ್ಯ ಗಾಂಧೀಜಿಯವರ ಜಯಂತಿಯಂದು ಪ್ರಾಣಿವಧೆಯನ್ನು ನಿಷೇಧಿಸಿರುವುದಾಗಿ ಘನ ಸರ್ಕಾರವು ಮೊದಲೇ ಪ್ರಕಟಣೆ ನೀಡುವುದುಂಟು. ಅದೇ ಗಾಂಧಿಜಯಂತಿಯಂದು ದೊಡ್ಡರಾಮಪುರದಲ್ಲಿ 179 ಕೋಣಗಳು, ಅಸಂಖ್ಯಾತ ಕುರಿಗಳು ಮತ್ತು ಕೋಳಿಗಳು ವಧೆಯಾದುದು ಅಷ್ಟೇ ಸತ್ಯಸಂಗತಿ. ಈ ಪ್ರಾಣಿವಧೆಯಲ್ಲಿ ಸುತ್ತಲಿನ ಹಳ್ಳಿಗಳ ಭಕ್ತರು ಕೈಗೂಡಿಸುವುದುಂಟು. ತೀರ್ಥಪುರ, ಕಾತರಕಿಹಾಳ, ಎರೇಕಟ್ಟೆ, ದೊಡ್ಡರಾಮಪುರ, ಚಿಕ್ಕ ರಾಮಪುರ, ಬರಸಿಡಿಲಹಳ್ಳಿ, ಅಜ್ಜಿಗುಡ್ಡ, ಗೊಲ್ಲರಹಟ್ಟಿ ಮುಂತಾದ ಗ್ರಾಮಗಳವರೂ ಹರಕೆ ಸಲ್ಲಿಸಲು ಬರುವುದುಂಟು.

ಪತ್ರಿಕೆಯ ಲೇಖನ ನೋಡುತ್ತಲೇ ಅನೇಕ ಶರಣರು, ಕಾರ್ಯಕರ್ತರು ತಲ್ಲಣಿಸಿದರು. ರಾಷ್ಟ್ರೀಯ ಬಸವ ದಳದ ಗಣನಾಯಕರಾದ ಶ್ರೀ ದಯಾನಂದ ಸ್ವಾಮಿಗಳು ಇಂಥ ಮೂಢ ಮತ್ತು ಕ್ರೂರ ಆಚರಣೆಗಳ ವಿರುದ್ಧ ಹೋರಾಡಬೇಕೆಂದು ಕರೆ ಕೊಟ್ಟರಲ್ಲದೆ, ಕಾರ್ಯಕಾರಿ ಸಮಿತಿಯ ಆದೇಶ ಬೇಡಿದರು. ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಒಪ್ಪಿಗೆ ನೀಡಿದ್ದಲ್ಲದೆ "ಪ್ರಾರ್ಥನೆ-ಪೂಜೆ-ಯೋಗಾಭ್ಯಾಸದಂತಹ ಧಾರ್ಮಿಕ ಆಚರಣೆಗಳೊಡನೆ, ಧರ್ಮ-ದೇವರ ಹೆಸರಿನಲ್ಲಿ ನಡೆಯುವ ಅರ್ಥರಹಿತ ಮತ್ತು ಅಮಾನುಷ ಆಚರಣೆಗಳನ್ನು ತಡೆಗಟ್ಟುವುದೂ ಧರ್ಮವಂತನ ಆದ್ಯ ಕರ್ತವ್ಯ. ಹಿಂದು ತತ್ತ್ವಜ್ಞಾನವು ಅನೇಕ ಉದಾತ್ತ ಆಲೋಚನೆಗಳು, ಮೌಲ್ಯಗಳಿಂದ ಕೂಡಿರುವುದು ಹೆಮ್ಮೆಯ ಸಂಗತಿಯಾದರೂ, ಅಷ್ಟೇ ಕೆಳಮಟ್ಟದ ಮೂಢ ಮತ್ತು ಕ್ರೂರ ಆಚರಣೆಗಳಿಂದ ಕೂಡಿ, ನಾಚಿ ತಲೆತಗ್ಗಿಸುವಂತೆ ಮಾಡುತ್ತದೆ. 20ನೆಯ ಶತಮಾನದ ವೈಜ್ಞಾನಿಕ ಚಿಂತನೆಯ ಪರಿಸರದಲ್ಲಿದ್ದೂ ಆದಿ ಮಾನವನು ಆಚರಿಸುತ್ತಿದ್ದ ಕ್ರೂರ ಆಚರಣೆಗಳನ್ನು ಇನ್ನೂ ಉಳಿಸಿಕೊಂಡು ಮಾನವೀಯತೆಗೆ ಸವಾಲು ಹಾಕುತ್ತಿದೆ. ರಾಮಪುರದಲ್ಲಿ ಮಾರಮ್ಮದೇವತೆಗೆ ಪ್ರಾಣಬಲಿ ಕೊಡುವ ಸನ್ನಿವೇಶದಲ್ಲಿ ಮುಗ್ಧ ಹಾಗೂ ಮೂಕಜೀವಿಗಳಾದ ಕೋಣ, ಕುರಿ, ಮೇಕೆ, ಕೋಳಿಗಳು ಮೂಢಭಕ್ತರ ಕತ್ತಿ-ಮಚ್ಚು-ಕುಡುಗೋಲುಗಳಿಗೆ ಆಹುತಿಯಾಗಿ, ಸಾಯುವಾಗ ವಿಲಕ್ಷಣವಾಗಿ ವಿಲಿವಿಲಿ ಒದ್ದಾಡುತ್ತ, ಬಾಯಿ ಬಿಡುತ್ತ ಅಪಾರವಾದ ನೋವು ಅನುಭವಿಸುತ್ತಲಿರುವುದು ಕರುಣಾಜನಕ ದೃಶ್ಯ.

"ಇಂಥ ಭಯಂಕರ ಪ್ರಸಂಗ ಅಕ್ಟೋಬರ 30 ರಂದು ಪುನರಾವರ್ತನೆಯಾಗುವುದು ತಿಳಿದು ಬಂದಿತು. ಮೊದಲ ಹಿರಿಜಾತ್ರೆಯಾದ 4 ವಾರಗಳಿಗೆ ಇನ್ನೊಂದು ಮರಿ ಜಾತ್ರೆ. ಈ ಮರಿಜಾತ್ರೆಯಲ್ಲಿ ಪಶುಬಲಿಯ ಪುನರಾವರ್ತನೆ. ಕರ್ನಾಟಕದ ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ 1959 ರ ಪ್ರಕಾರ (ಸಂಖ್ಯೆ-3) ಹಿಂದೂ ದೇವಾಲಯಗಳಲ್ಲಿ, ಅವುಗಳ ಆವರಣದಲ್ಲಿ ಪ್ರಾಣಿ-ಪಕ್ಷಿಗಳನ್ನು ಬಲಿಗೊಡಬಾರದು. ಈ ಅಧಿನಿಯಮದ ಪ್ರಕಾರ ದೇವಾಲಯಗಳಲ್ಲಿ ಪ್ರಾಣಿಬಲಿ ಮಾಡುವವರಿಗೆ ಆರು ತಿಂಗಳ ಕಾರಾಗೃಹವಾಸ, ಐದು ನೂರು ರೂಪಾಯಿಗಳ ಜುಲ್ಮಾನೆ ವಿಧಿಸಬೇಕೆಂದಿದೆ. ನಮ್ಮ ದೇಶದಲ್ಲಿ ಕಾಯಿದೆಗಳು ಮಾರುದ್ದ-ಪುಸ್ತಕಗಳಲ್ಲಿ, ಆಚರಣೆಯಲ್ಲಿ ಮಾತ್ರ ಚೋಟುದ್ದ. ಕಾರಣ, ಸಮಾಜದ ಶುದ್ಧೀಕರಣ ಮಾಡುವುದರಲ್ಲಿ ಕಾಯಿದೆ ಪಾಲಕರಲ್ಲಿ ನಿರಾಸಕ್ತಿ ತುಂಬಿರುವುದು; ಮತ್ತು ಸ್ವತಃ ತಾವೇ 'ಇದನ್ನು ಮಾಡದಿದ್ದರೆ ಏನಾದೀತೋ, ತಡೆದರೆ ಏನಾದೀತೋ' ಎಂದು ಭಯಗ್ರಸ್ತ ಮನಸ್ಕರಾಗಿರುವುದು. ಅಧಿಕಾರದಲ್ಲಿರುವಾಗ ಕಾಯಿದೆ ಕಾನೂನು ಮಾಡುವ ಮಾಜಿ ಸಚಿವ ಬಸವಯ್ಯನವರಂಥವರೇ ಹೆಮ್ಮೆಯಿಂದ ಕತ್ತಿಹಿಡಿದು ನಿಂತಿರುವುದನ್ನು ಕಂಡಾಗ ಎಂಥಾ ವಿಚಿತ್ರ ದೇಶವಿದು ಎನ್ನಿಸದಿರದು. ಕರ್ನಾಟಕದ ಪ್ರಾಣಿಬಲಿ ಅಧಿನಿಯಮ 1959 ರ ಪ್ರಕಾರ ದೇವಾಲಯದ ಬಳಿ, ದೇವರ ಹೆಸರಿನಲ್ಲಿ ಪ್ರಾಣಿವಧೆ ಮಾಡಿದರೆ ಅಂಥ ಕಾರ್ಯವನ್ನು

ಮಾಡಿದವರನ್ನು ಸಬ್ ಇನ್ಸ್‌ಪೆಕ್ಟರ್ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಯು ವಾರಂಟ್ ಇಲ್ಲದೆ ದಸ್ತಗಿರಿ ಮಾಡುವ ಅಧಿಕಾರವನ್ನು ಕೊಟ್ಟಿದೆ. ಇಷ್ಟಿದ್ದೂ ಪ್ರಾಣಿವಧೆಯು ರಾಜಕೀಯ ಮುಂಖಡರ ನೇತೃತ್ವದಲ್ಲಿ ನಡೆಯುತ್ತಿರುವುದು ವಿಷಾದಕರವಲ್ಲವೆ?

ಎರಡು ದಿಕ್ಕಿನಿಂದ ಪ್ರಯತ್ನ

"ನಮ್ಮ ದೇಶದಲ್ಲಿ ಬಹುಪಾಲು ಕಾಯ್ದೆಗಳು ಕಾಗದದ ಹುಲಿಗಳು. ಆದ್ದರಿಂದ ಧಾರ್ಮಿಕ ಪ್ರಜ್ಞೆಯುಳ್ಳವರು ಈಗ ಹೃದಯ ಪರಿವರ್ತನೆಯ ಕಾರ್ಯಕ್ರಮ ರೂಪಿಸಬೇಕು. "ಮಾರಿದೇವತೆಗೆ ಪ್ರಾಣಿಬಲಿ ಮಾಡುತ್ತಿರುವುದರಿಂದ ಪರಮ ಪುರುಷಾರ್ಥವೊಂದನ್ನು ಸಾಧಿಸುತ್ತಿದ್ದೇವೆ." ಎಂಬ ಮೂಢನಂಬಿಕೆ ತಳೆದಿರುವ ಭಕ್ತರಲ್ಲಿ ನಿಜಧರ್ಮದ ಪರಿಚಯ ಮಾಡಿಕೊಡಬೇಕು. 'ಕುರಿ ಸತ್ತು ಕಾವುದೇ ಹರ ಮುಳಿದವರ ?', 'ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' 'ಕುರಿ ಬೇಡ, ಮರಿ ಬೇಡ, ಬರಿಯ ಪತ್ರೆಯ ತಂದು ಪೂಜಿಸು' ಎಂಬ ಬಸವಣ್ಣನವರ ವಾಣಿಯನ್ನು ಜನರಿಗೆ ಮನವರಿಕೆ ಮಾಡಬೇಕು. 'ಯಾರಿಗೆ ಜೀವವನ್ನು ಕೊಡಲು ಶಕ್ತಿ ಇಲ್ಲವೋ ಅವರಿಗೆ ಜೀವವನ್ನು ತೆಗೆದುಕೊಳ್ಳಲಿಕ್ಕೆ ಹಕ್ಕಿಲ್ಲ' ಎಂಬ ಬುದ್ಧನ ಸಂದೇಶವನ್ನು, 'ಅಹಿಂಸೆಯೇ ಪರಮ ಧರ್ಮ' ಎಂಬ ಮಹಾವೀರರ ಉಪದೇಶವನ್ನು ಸಾರಬೇಕು. ಎಂದು ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರಿಗೆ ಪೂಜ್ಯ ಮಾತಾಜಿಯವರು ಉಪದೇಶಿಸಿದರಲ್ಲದೆ, "ಆರಕ್ಷಕ ಇಲಾಖೆಯ ಸಹಕಾರದೊಡನೆ ಕಾನೂನು ಬದ್ಧವಾಗಿಯೇ ಸಮಾಜದ ಶುದ್ಧೀಕರಣಕ್ಕೆ ಯತ್ನಿಸುವ ಪ್ರಯತ್ನ ಮಾಡಬೇಕು." ಎಂದು ಕರೆ ಕೊಟ್ಟರು. ಈ ಕಾರ್ಯದ ಪೂರೈಕೆಗೆ ರಾಷ್ಟ್ರೀಯ ಬಸವ ದಳದ ಗಣನಾಯಕರಾದ ಶ್ರೀ ದಯಾನಂದ ಸ್ವಾಮೀಜಿಯವರಿಗೆ ಹೊಣೆಗಾರಿಕೆ ವಹಿಸಿದರು.

ದೇವರ ಹೆಸರಿನಲ್ಲಿ ನಡೆಯುವ ಈ ಕ್ರೂರಕರ್ಮಕಾಂಡವನ್ನು ನಿಲ್ಲಿಸಲು ಶ್ರೀ ಅರಿಹಂತ ಜೈನ್ ಪ್ರಾಣಿ ಕಲ್ಯಾಣ ಸಂಸ್ಥೆ ಮತ್ತು ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘ, ಮುಂತಾದ ಸಂಸ್ಥೆಗಳಲ್ಲದೆ ಸರ್ವೋದಯ ಸಂಘಟನೆಯ ಪೂಜ್ಯ ಮಹಾದೇವಿ ತಾಯಿ, ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷ ಶ್ರೀ ಈಶ್ವರ ಮಲ್ಲಪ್ಪ ಮಗದುಮ್, ಪ್ರಾಣಿದಯಾ ಸಂಘದ ಅಧ್ಯಕ್ಷ ಉತ್ತಮ ಚಂದ್ ದುಗ್ಗರ್, ಆವಂತಿ ಪಾರ್ಶ್ವನಾಥ ಲಬ್ಧಿ ಜೈನ್ ಒಕ್ಕೂಟದ ಇಂದ್ರಮಲ್ ಕೊಠಾರಿ, ಪ್ರಮುಖ ವಾಣಿಜ್ಯೋದ್ಯಮಿಗಳಾದ ದೇವಕುಮಾರ್ ಜೈನ್, ಅಮರ ಚಂದ್ ದಾಗಾ, ಮೀನಾ ಎಸ್. ಸ್ವಾಮಿ, ತೇಜರಾಜ್, ತಿಪಟೂರಿನ ಸರ್ವೋದಯ ಕಾರ್ಯಕರ್ತ ದಾಸಪ್ಪ ಮುಂತಾದವರೆಲ್ಲ ಸಂಯುಕ್ತವಾಗಿ ಹೋರಾಟಕ್ಕೆ ತೊಡಗಲು ನಿಶ್ಚಯಿಸಿದರು. ಪತ್ರಿಕಾ ವರದಿಯ ಪ್ರಕಾರ ಮರಿಜಾತ್ರೆಯ ಬಲಿ ನವಂಬರ್ 2ಕ್ಕೆ ಇದೆಯೆಂದು ಮಾಹಿತಿ ಸಂಗ್ರಹಿಸಲು ಈ ಪ್ರತಿಭಟನಕಾರರ ತಂಡ ರಾಮಪುರಕ್ಕೆ ಹೋದಾಗ ಪ್ರಾಣಿವಧೆಯು ಅಕ್ಟೋಬರ್ 30ಕ್ಕೆ ಇರುವುದು ತಿಳಿಯಿತು. ಹೀಗಾಗಿ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮತ್ತು ಇನ್ನಿತರ ಹೋರಾಟ ಪರ ಸಂಘಟನೆಗಳವರು ಪತ್ರಿಕಾಗೋಷ್ಠಿಯನ್ನು ಅಕ್ಟೋಬರ್ 29 ರಂದು ಕರೆದು, ತಮ್ಮ ನಿಲುವನ್ನು, ನಿರ್ಧಾರವನ್ನು ಮಂಡಿಸಿದರಲ್ಲದೆ ಸರ್ಕಾರದ ಮತ್ತು ಆರಕ್ಷಕ ಇಲಾಖೆಯ ಸಂಪೂರ್ಣ ನೆರವನ್ನು ಕೋರಿದರು. ಪೂಜ್ಯ ಮಹಾದೇವಿ ತಾಯಿಯವರು ಗೃಹ ಸಚಿವ ಶ್ರೀ ಧರ್ಮಸಿಂಗ್ ಅವರನ್ನು ಕಂಡಾಗ ಅವರು ಸಂಪೂರ್ಣ ನೆರವಿನ ಭರವಸೆ ನೀಡಿದರು. ತಪ್ಪುದಾರಿಯಲ್ಲಿ ನಡೆದು ದೇವರನ್ನು ಒಲಿಸಲು ಅಮಾನುಷ ಕ್ರೂರ ಆಚರಣೆ ಮಾಡುವ ಜನರ ಮನಸ್ಸಿಗೆ ನಾಟುವಂತೆ ಉಪನ್ಯಾಸ ಮಾಡಲು ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಒಂದು ತಂಡವನ್ನು ರಚಿಸಲಾಯಿತು. ಸುತ್ತಲಿನ ಹಲವಾರು ಹಳ್ಳಿಗಳಲ್ಲಿ ಮೊದಲು ಸಂಚರಿಸಿ ಜನ ಜಾಗೃತಿ ಮಾಡಬೇಕೆಂಬ ಯೋಜನೆಯನ್ನು ಸಮಯಾಭಾವದಿಂದ ಕೈಬಿಟ್ಟು, ಮುಖ್ಯ ಕೇಂದ್ರವಾದ ದೊಡ್ಡರಾಮಾಪುರದಲ್ಲಿ ಪ್ರತಿಭಟನಾ ತಂಡ ವಾಸ್ತವ್ಯ ಮಾಡಿತು. ಆಗೊಂದು ಸೋಜಿಗದ ಸಂಗತಿಯು ನಡೆಯಿತು. ಪೂಜ್ಯ ಗಂಗಾದೇವಿಯವರ ಪ್ರವಚನವು ಬಹಳ ಜನರ ಮನಸ್ಸಿಗೆ ಪರಿಣಾಮ ಬೀರುತ್ತಿರುವುದನ್ನು ಕಂಡು, ಕೆಲವು ಪಟ್ಟಭದ್ರ ಹಿತಾಸಕ್ತರು ಓರ್ವ ತರುಣಿಗೆ ದೇವಿಯು ಆವಾಹನೆಯಾದಂತೆ ನಟಿಸಲು ಪ್ರಚೋದಿಸಿದರು. ಪ್ರವಚನ ಮುಗಿಯುತ್ತಲೇ ಧಾವಿಸಿದ 'ದೇವಿ', "ಇಷ್ಟು ದಿವಸಗಳಿಂದ ಕೊಡುತ್ತ ಬಂದಿರುವ ಬಲಿಯನ್ನು ನಿಲ್ಲಿಸುವಿರಾ ? ಇದರಿಂದ ನನಗೆ ಕೋಪ ಬಂದಿದೆ. ನಿಮಗೆಲ್ಲ ಕೆಟ್ಟದಾಗುವುದು." ಎಂದು ಆವೇಶದಿಂದ ಚೀರಿದಳು. ಆಗ ಅವಳ ಬೆಂಬಲಕ್ಕೆ ಕೆಲವರು ಬಂದರು. ಶ್ರೀ ದಯಾನಂದ ಸ್ವಾಮಿಗಳು "ನೀನು ನಿಜವಾದ ದೇವಿಯೇ ಆಗಿದ್ದರೆ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ, ಉತ್ತರ ಕೊಡು" ಎಂದು ತಾತ್ವಿಕ ಪ್ರಶ್ನೆಗಳನ್ನು ಕೇಳಿದರು. ಉತ್ತರಿಸಲಾರದೆ ಆ ತರುಣಿಯು ಪೆಚ್ಚಾದಾಗ, ಅವಳನ್ನು ಬೆಂಬಲಿಸಿದವರು ಬೆಪ್ಪಾದರು. ಕೆಲವು ಉಗ್ರವಾದಿಗಳು ಇಷ್ಟು ವರ್ಷಗಳ ಕಾಲ ನಡೆದು ಬಂದಿರುವ ಸಂಪ್ರದಾಯವನ್ನು ನಿಲ್ಲಿಸಿದರೆ ನಮ್ಮ ಊರಿಗೆ ಕೆಡುಕಾಗುವುದು ಎಂದವರೇ ಬಲಿಕೊಡುವುದಾಗಿ ನಿರ್ಧರಿಸಿದರು. ಆಗ ಶ್ರೀ ದಯಾನಂದ ಸ್ವಾಮಿಗಳು ವೀರಶರಣ ಮಡಿವಾಳ ಮಾಚಿದೇವರಂತೆ ಧೈರ್ಯದಿಂದ ಮುನ್ನುಗ್ಗಿ ವಧಾ ಸ್ಥಾನದ ಬಳಿಗೆ ಹೋದರು. ಕಂಚಿನ ಕಂಠದಿಂದ ಗರ್ಜಿಸಿದರು "ದೇವರು ಕ್ರೂರಿಯಲ್ಲ, ದಯಾಮಯಿ. ತನ್ನ ಸೃಷ್ಟಿಯ ಒಂದಂಗವಾದ ಮುಗ್ಧ ಪ್ರಾಣಿಗಳನ್ನು ವಧಿಸಿ, ರಕ್ತ-ಮಾಂಸಗಳನ್ನು ಕೇಳನು. ನೀವು ಯಾವ ಪಾಪವನ್ನು ಮಾಡುತ್ತಿದ್ದೀರೆಂಬ ಅರಿವಿಲ್ಲದೆ ಇಂಥ ಕಾರ್ಯಗಳನ್ನು ಮಾಡುತ್ತಿದ್ದೀರಿ. ಒಂದು ವೇಳೆ ಪ್ರಾಣಿಬಲಿ ಕೊಡುವುದೇ ಆದರೆ ಮೊದಲು ನನ್ನನ್ನು ಬಲಿ ಕೊಡಿರಿ. ನಂತರ ಉಳಿದ ಪ್ರಾಣಿಗಳನ್ನು" ಎಂದರು. ಜನರು ದಿಗ್ಭ್ರಾಂತರಾದರು. ಆಗ ಎಸ್.ಪಿ. ಯವರು ಮತ್ತು ಡಿ. ಸಿ. ಯವರು ಉಳಿದ ಆರಕ್ಷಕ ಸಿಬ್ಬಂದಿಯೊಡನೆ ಮುನ್ನುಗ್ಗಿ ಜನರಿಗೆ ಎಚ್ಚರಿಕೆ ಸಾರಿದರು.

(19ನೆ ಪುಟಕ್ಕೆಮುಂದುವರಿಯುವುದು)

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಐದನೆಯ

ಶರಣ ಮೇಳ

ಬಸವ ಕ್ರಾಂತಿ ದಿನದ ಅಂಗವಾಗಿ

1992ನೆಯ ಜನವರಿ 12, 13, 14 ಮತ್ತು 15 ರಂದು

ಶರಣ ಮೇಳ ಉತ್ಸವ ಸಮಿತಿ

ಮಹಾಮನೆ ಮಹಾಮಠ,

ಕೂಡಲ ಸಂಗಮ ಸುಕ್ಷೇತ್ರ-587115

ತಾ॥ ಹುನಗುಂದ, ಜಿ॥ ಬಿಜಾಪುರ

ಶರಣ ಮೇಳ

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಜಾಗದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯ. ಇದು ಪರಸ್ಪರರಲ್ಲಿ ಸಮಾನತ್ವ; ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು. ಹಲವಾರು ಸಮ್ಮೇಳನಗಳು ಅಲ್ಲಲ್ಲೇ, ಆಗಾಗ ನಡೆಯುತ್ತಿದ್ದರೂ ಅವು ಮುಖ್ಯವಾಗಿ ಉಪನ್ಯಾಸಗಳ ಸರಮಾಲೆಯನ್ನು ಹೊಂದಿರುವುವೇ ವಿನಾ ಭಾಕ್ತಿಕ ಸಂಸ್ಕಾರವನ್ನು ಬೆಳೆಸುವದಿಲ್ಲ. ಸಮಾಜದ ಸಂಘಟನೆಯನ್ನು ಮಾಡಲಾರವು. ಭಾಕ್ತಿಕ ಸಂಸ್ಕಾರ ಮತ್ತು ಸಮಾಜ ಸಂಘಟನೆಯನ್ನು ಮುಖ್ಯಧ್ಯೇಯವಾಗಿಟ್ಟುಕೊಂಡು ಬಸವ ಕ್ರಾಂತಿ ದಿನದ (ಮಕರ ಸಂಕ್ರಾಂತಿ) ಅಂಗವಾಗಿ ಅಂಥದೊಂದು ಶರಣ ಮೇಳ ನಡೆಯಬೇಕು ಎಂದು ಸಂಕಲ್ಪಿಸಿ 1988ರಲ್ಲಿ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ಸಂಯೋಜಿಸಲಾಗಿತ್ತು.

ಕೂಡಲ ಸಂಗಮದಲ್ಲೇ ಏಕೆ ?

"ಶರಣ ಮೇಳ" ವು ಕೂಡಲ ಸಂಗಮದಲ್ಲಿ ನಡೆಯುವುದು ಅತ್ಯಂತ ಔಚಿತ್ಯಪೂರ್ಣವೆನಿಸುವುದು. ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಮತ್ತು ಐಕ್ಯಕ್ಷೇತ್ರವಾದ ಕೂಡಲ ಸಂಗಮ ಕ್ಷೇತ್ರವು ಶರಣ ಮೇಳಕ್ಕೆ ಸೂಕ್ತ ಮತ್ತು ಸಾಂಕೇತಿಕ ಸ್ಥಾನ. ಶರಣ ಧರ್ಮದ ಹಲವಾರು ಶರಣರು ಐಕ್ಯರಾದ ಕ್ಷೇತ್ರಗಳು ಶರಣ ಧರ್ಮದ ಕ್ಷೇತ್ರಗಳಾದರೆ, ಧರ್ಮಪಿತ ಬಸವಣ್ಣನವರ ಐಕ್ಯಸ್ಥಾನವಾದ ಕೂಡಲ ಸಂಗಮವು ಧರ್ಮಕ್ಷೇತ್ರವಷ್ಟೆ. ಹೀಗಾಗಿ ಬೌದ್ಧರಿಗೆ ಬುದ್ಧಗಯೆ, ಸಾಂಪ್ರದಾಯಿಕ ಹಿಂದುಗಳಿಗೆ ಕಾಶಿ, ಮುಸಲ್ಮಾನರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಕ್ರೈಸ್ತರಿಗೆ ಜೆರೊಸಲೆಮ ಧರ್ಮಕ್ಷೇತ್ರಗಳಾದಂತೆ ಕೂಡಲ ಸಂಗಮವು ಬಸವ ಧರ್ಮೀಯರಿಗೆ ಧರ್ಮಕ್ಷೇತ್ರ.

ಭೌಗೋಲಿಕ ದೃಷ್ಟಿಯಿಂದಲೂ ಕೂಡಲ ಸಂಗಮವು ಕರ್ನಾಟಕದ ಹಲವಾರು ಕ್ಷೇತ್ರಗಳಿಗಿಂತಲೂ ಮಧ್ಯಭಾಗದಲ್ಲಿದೆ. ಪರಮಾತ್ಮನು ಕರುಣಿಸಿದ ಒಂದು ಮಹಾನ್ ವರವೆಂಬಂತೆ ಬಸವ ಸಾಗರ (ನಾರಾಯಣ ಪುರ) ಅಣೆಕಟ್ಟು ತನ್ನ ಸಂಗ್ರಹಿತ ನೀರಿನಿಂದಾಗಿ ಸಾಕಷ್ಟು ನೀರನ್ನು ಕೊಡುವುದು. ಪ್ರಾರ್ಥನೆಗಾಗಿ ಬೃಹತ್ ಮೈದಾನಗಳು ಸಹ ಇವೆ. ರಾಷ್ಟ್ರೀಯ ಹೆದ್ದಾರಿ 13 ಕೂಡಲ ಸಂಗಮದ ಸಮೀಪದಲ್ಲೇ ಇದೆ. ಈ ಎಲ್ಲ ಕಾರಣಗಳಿಂದ ಕೂಡಲ ಸಂಗಮವು ಅತ್ಯಂತ ಯೋಗ್ಯವಾಗಿದೆ.

ಬಸವ ಕ್ರಾಂತಿ ದಿನದಂದು ಏಕೆ ?

"ಶರಣ ಮೇಳ" ಎಂಬ ಈ ಬೃಹತ್ ಮೇಳವು ಪ್ರತಿ ವರ್ಷವೂ ಸಾಮಾನ್ಯವಾಗಿ ಜನವರಿ 14 ಬಸವ ಕ್ರಾಂತಿ ದಿನ (ಸಂಕ್ರಾಂತಿ) ದಂದು ನಡೆಯಬೇಕೆಂದು

ಯೋಜಿಸಿರುವುದರ ಹಿನ್ನೆಲೆಯನ್ನು ತಿಳಿಯೋಣ. ಸಿಂಗಿರಾಜನ ಅಮಲ ಬಸವ ಪುರಾಣದಲ್ಲಿ ಹೀಗೊಂದು ವಿಷಯದ ಪ್ರಸ್ತಾಪವಿದೆ. (ಆರನೆಯ ಸಂಧಿ ಪದ್ಯ 11 ರಿಂದ 21). ಭಾದ್ರಪದ ಬಹುಳ ಷಷ್ಠಿ ಮಂಗಳವಾರ ಕಪಿಲ ಷಷ್ಠಿ ಮುಹೂರ್ತ ಒದಗಿರಲು ಹಲವಾರು ರೀತಿಯ ವೈಭವದ ಪೂಜೆಗಳನ್ನು ಅರ್ಚಕರು ಮಾಡುತ್ತಿರುವರು. ಕ್ಷೇತ್ರದಲ್ಲಿ ನೆರೆದ ಜನ ಸಮೂಹವು ನೀರಲ್ಲಿ ಮುಳುಗುವುದು, ಮರವನ್ನು ಸುತ್ತುವುದು, ಬೆಳ್ಳಿಯ ಕೊಂಬುಗಳನ್ನು ತೊಡಿಸಿದ ಆಕಳುಗಳನ್ನು ದಾನಕೊಡುವುದು, ಸಹಸ್ರ ಕಮಲಪೂಜೆ ಮಾಡುವುದು–ಮುಂತಾಗಿ ನಡೆಸಿರುವಾಗ ಬಸವಣ್ಣನವರು ಅಂತರ್ಮುಖಿಯಾಗಿ ಚಿಂತಿಸುತ್ತಾರೆ. ನಿಜಕ್ಕೂ ದೇವರಿಗೆ ಇವೆಲ್ಲ ಬೇಕೆ ? ದೇವನು ಇಂಥ ವೈಭವಕ್ಕೆ ಒಲಿಯುವುದಾದರೆ ಬಡಭಕ್ತರ ಗತಿ ಏನು ? ಅವರೆಲ್ಲ ದೇವಕೃಪೆಯಿಂದ ವಂಚಿತರೆ ?

ಬಸವಣ್ಣನು ಭಕ್ತಿಭಾವ ಭರದಿಂದ ವನಸುಮಗಳನ್ನಾಯ್ದು ತಂದು ಒಳಗೆ ಹೋಗಿ ಸಂಗಮೇಶ್ವರನಿಗೆ ಪೂಜೆ ಸಲ್ಲಿಸಲು ಆರಂಭಿಸುತ್ತಿದ್ದಂತೆಯೇ ಪೂಜಾರಿಗಳ ಕೋಪವು ಗಗನಕ್ಕೇರುತ್ತದೆ. "ಹಿಡಿ,, ಹೊಡೆ, ಕೊಲ್ಲು" ಎಂದು ಅರ್ಚಕರು ಭಕ್ತಿ ಪರವಶತೆಯಿಂದ ಪೂಜಿಸುವ ಬಸವಣ್ಣನನ್ನು ಎಳೆದಾಡುತ್ತಾರೆ. ತಮ್ಮ ಹೊಟ್ಟೆ ಪಾಡಿಗೆ ಬಸವಣ್ಣನು ಧಕ್ಕೆ ತರುವುದೇ ಅಲ್ಲದೆ ವೇದಾಗಮ ಶಾಸ್ತ್ರೋಕ್ತವಲ್ಲದ ಪೂಜೆ ಮಾಡುತ್ತಾನೆ ಎಂದು ಭಾವಿಸಿ ಜಗಳವಾಡುತ್ತ, ಅರ್ಭಟಿಸುತ್ತ ಮೇಲೆ ಎರಗುತ್ತಾರೆ. ಆಗ ಸಂಗಮೇಶ್ವರ ಲಿಂಗದಿಂದ ಬ್ರಹ್ಮನಾದ ಉಂಟಾಗಿ, "ಎಲವೋ ನೀವು ಮಾಡಿದ ಪೂಜೆ ಹುಸಿ ; ಬಸವನ ಪೂಜೆಯೇ ನನಗೆ ರಮ್ಯ" ಎಂಬ ಆಕಾಶವಾಣಿ ಕೇಳಿ ಬರುತ್ತದೆ. ಆಗ ಅಲ್ಲಿಯ ವಿಪ್ರಸಮೂಹ, ಭಕ್ತ ಸಮೂಹವು ಬೆಕ್ಕಸ ಬೆರಗಾಗಿ ನಿಂತು ಬಸವಣ್ಣನಿಗೆ ಭಯಭಕ್ತಿಯಿಂದ ವಂದಿಸುವುದು, "ಸಂಗನೇ ಬಸವ, ಬಸವನೇ ಸಂಗ" ಎಂಬ ನಂಬಿಗೆ ಅವರಲ್ಲಿ ಬಲಿಯುವುದು.

ಈ ಘಟನೆ ಎಷ್ಟು ಮಹತ್ವಪೂರ್ಣವೆಂದರೆ, ಇದು ಬಸವಣ್ಣನ ವಿಚಾರ-ಆಚಾರ ನಡೆನುಡಿಗಳೆಲ್ಲ ದೇವನಿಗೆ ಬಲು ಪ್ರಿಯ ಎಂಬುದನ್ನು ಸಾರುವುದಷ್ಟೆ ಅಲ್ಲ ಜನ ಸಮುದಾಯದ ಗಮನವನ್ನು ಸೆಳೆಯಿತು. "ಓಹೋ...ಇಲ್ಲೊಬ್ಬ ಮಹಾನ್ ವಿಚಾರವಾದಿ, ಚಿಂತಕನೊಬ್ಬನಿದ್ದಾನೆ. ಈತ ದೇವನ ಪ್ರತಿನಿಧಿಯಾಗಿ ಲೋಕಕ್ಕೆ ಮಾರ್ಗ ತೋರಲು ಬಂದವನು" ಎಂಬುದನ್ನು ಸಾರಿಸಾರಿ ಹೇಳುತ್ತದೆ. ಇಷ್ಟೇ ಅಲ್ಲ ಈ ವಾರ್ತೆ ಬಿಜ್ಜಳನ ಕಲ್ಯಾಣ ನಗರಕ್ಕೂ ತಲ್ಪಿತು. ಜಾತ್ರೆಗೆ ಬಂದ ಜನರು ಈ ಘಟನೆಯನ್ನು ವರ್ಣರಂಜಿತವಾಗಿ ಹೇಳುತ್ತಾ ಹೋದಾಗ ಕೇಳಿದ ಬಿಜ್ಜಳನು ಬೆಕ್ಕಸ ಬೆರಗಾದ. ಬಲದೇವ ದಂಡನಾಯಕನು ಅಲ್ಲಿಂದಲೇ ಬಸವಣ್ಣನಿಗೆ ಭಕ್ತಿ ಭಾವದಿಂದ ಕೈ ಮುಗಿದನಂತೆ, ಅಂತೂ ಜಡ ಸಂಪ್ರದಾಯವೊಂದನ್ನು ಮೀರಿ ಬಸವಣ್ಣನವರು ಹೊಸ ದಾರಿಯೊಂದನ್ನು ತುಳಿದ ; ಹೊಸ ವಿಚಾರವನ್ನು ಪ್ರತಿಪಾದಿಸಿದ ದಿನವಂದು.

ಬಸವ ಕ್ರಾಂತಿ ದಿನ ಎಂದು ?

ಸಿಂಗಿರಾಜ ಕವಿಯು ಭಾದ್ರಪದ ಷಷ್ಠಿ ಎಂದು ಉಲ್ಲೇಖಿಸುವನಾದರೂ ಈ ಘಟನೆ ಭಾದ್ರಪದ ಮಾಸದಲ್ಲಿ ನಡೆದಿಲ್ಲ. ಕೂಡಲ ಸಂಗಮದಲ್ಲಿ ಜನರು ವಿಶೇಷವಾಗಿ ಸೇರುವುದು ವರ್ಷದಲ್ಲಿ ಮೂರುಬಾರಿ, ಚೈತ್ರ ಮಾಸದಲ್ಲಿ, ಮತ್ತು ಕಾರ್ತೀಕ ಮಾಸ ದಲ್ಲಿ ಜಾತ್ರೆಯಾದರೆ, ಮಕರ ಸಂಕ್ರಾಂತಿಯ ಸಮಯದಲ್ಲಿ ತೀರ್ಥಸ್ನಾನಕ್ಕೆಂದು ಜನರು ಧಾವಿಸಿ ಬರುವರು. ಭಾದ್ರಪದ ಮಾಸದಲ್ಲಿ ಅಂತಹ ವಿಶೇಷ ಸಮಾವೇಶಗಳೇನೂ ಇರುವುದಿಲ್ಲ. ಸಿಂಗಿರಾಜನಿಗೆ ಬಸವಣ್ಣನಿಗೆ ಸಂಗಮನಾಥನ ಆಕಾಶವಾಣಿಯಾದುದು ಮುಖ್ಯವೇ ವಿನಾ ಅದು ಯಾವ ದಿನದಂದು ಎಂಬುದಲ್ಲ, ಹೀಗಾಗಿ ಅವನು ಉಹಾತ್ಮ ಕವಾಗಿ ಭಾದ್ರಪದ ಷಷ್ಠಿ ಎಂದು ಹೇಳಿದ್ದರೂ, ಆ ದಿವಸವು ಮಕರ ಸಂಕ್ರಾಂತಿ ಯಂದು ಎಂದು ಸುಲಭವಾಗಿ ಊಹಿಸಬಹುದು. ಅಂದು ತೀರ್ಥಸ್ನಾನ ಮಾಡಿ ಪವಿತ್ರರಾಗಬೇಕೆಂಬ ಹಂಬಲದಿಂದ ಜನರು ತೀರ್ಥಕ್ಷೇತ್ರಗಳಿಗೆ ಧಾವಿಸುವುದುಂಟು. ಇದನ್ನೆಲ್ಲ ಕಂಡು ಬಸವಣ್ಣನವರು, "ನೀರನು ಕಂಡಲ್ಲಿ ಮುಳುಗುವರಯ್ಯ" ಎಂದು "ತೊರೆಯ ಮೀವ ಅಣ್ಣಗಳಿರಾ ತೊರೆಯಿಂ ಭೋ ಪರಧನವ, ತೊರೆಯಿಂ ಭೋ ಪರಸತಿಯ" ಎಂದು ಹಾಡಿರಲಿಕ್ಕೂ ಸಾಕು. ಧರ್ಮವನ್ನು ಸರಳೀಕರಣಗೊಳಿಸಿದ, ಶ್ರೀಸಾಮಾನ್ಯನಿಗೆ ಮುಟ್ಟಿಸಿದ ಬಸವಣ್ಣನವರು ನವಧರ್ಮದ ಕ್ರಾಂತಿಕಹಳೆ ಮೊಳ ಗಿದ ದಿವಸ ಸಂಕ್ರಾಂತಿ. ಹೀಗಾಗಿ ಅದು ಬಸವ ಕ್ರಾಂತಿ ದಿನವಲ್ಲವೆ ?

ಬಸವಣ್ಣನವರು ಸಂಗಮನಾಥನ ವಾಣಿಯನ್ನು ಕೇಳಿದ ವಿಶೇಷ ದಿನವಾದ ಸಂಕ್ರಾಂತಿಯು ಇಂತಹ ಶರಣ ಮೇಳದ ಸಮಾವೇಶಕ್ಕೆ ಸೂಕ್ತವಾದ ದಿನ. ಕೇವಲ ತೀರ್ಥಸ್ನಾನ ಮಾಡಿದ ಮಾತ್ರಕ್ಕೇ ಪರಮ ಪುರುಷಾರ್ಥವೊಂದನ್ನು ಸಾಧಿಸಿದಂತಾಗು ವುದೆಂಬ ನಂಬಿಕೆ ಇರುವ ಜನರಿಗೆ, ಜ್ಞಾನ ಸ್ನಾನ ಮಾಡುವ ಸದವಕಾಶವೂ ಶರಣ ಮೇಳದಿಂದ ದೊರೆಯುವುದು. ಮಕರ ಸಂಕ್ರಾಂತಿಯು ತೀರಾ ಚಳಿಗಾಲವಲ್ಲದ, ತೀವ್ರ ಬೇಸಿಗೆಯ ತಾಪವನ್ನೂ ಹೊಂದದ ಸೂಕ್ತವಾದ ಹವಾಮಾನವನ್ನು ಹೊಂದಿ ರುವ ಕಾರಣ ಶರಣ ಮೇಳವನ್ನು ಸಂಕ್ರಾಂತಿಯಂದು ಸಂಯೋಜಿಸಲು ನಿರ್ಧರಿಸಲಾಗಿ ದೆಯಲ್ಲದೆ, ಅದು "ಬಸವ ಕ್ರಾಂತಿ ದಿನ"ವಾಗಿ ಆಚರಿಸಲ್ಪಡಲಿದೆ.

ಜಾತಿ ವರ್ಣ ವರ್ಗ ರಹಿತ ಸಮಾಜವನ್ನು ಅರ್ಥಾತ್ ಕಲ್ಯಾಣ ರಾಜ್ಯವನ್ನು ಕಟ್ಟಲು ವಿಶ್ವಗುರು ಬಸವಣ್ಣನವರು ಕರ್ತಾರನ ಕಮ್ಮಟವಾದ ಈ ಮರ್ತ್ಯಲೋಕ ದಲ್ಲಿ ಶ್ರಮಿಸಿದ್ದಾರೆ. ಆದ್ದರಿಂದ ಅವರ ಕನಸು, ಆಶೋತ್ತರ, ತತ್ತ್ವ, ಸಿದ್ಧಾಂತ ಗಳಿಗೆ ಮೂರ್ತರೂಪಕೊಡುವಂತೆ ಈ ಶರಣ ಮೇಳವು ಕಾರ್ಯಮಾಡುವುದವಶ್ಯವಿದೆ.

ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು "ಶರಣ ಮೇಳ"ದ ಕಾರ್ಯಕ್ರಮ ರೂಪು ಗೊಳ್ಳಬೇಕಾಗಿದೆ. ಇದು ಯಾವುದಾದರೊಂದು ವ್ಯಕ್ತಿಯ, ಸಂಸ್ಥೆಯ ಸೀಮಿತ ಸಮ್ಮೇಳನವಾಗದೆ ಇಡೀ ಸಮಾಜದ ತತ್ತ್ವಾಭಿಮಾನಿಗಳನ್ನು ಒಂದೆಡೆ ಸೇರಿಸುವ "ಶರಣ ಸಂಗಮ"ವಾಗಬೇಕೆಂದು ನಮ್ಮ ಹಂಬಲ. ಆದ್ದರಿಂದ ಸಮ್ಮೇಳನದ ಸಂಘ

ಟನೆಗಾಗಿ ಹಲವಾರು ರಾಜ್ಯಗಳನ್ನು ಪ್ರತಿನಿಧಿಸುವಂತೆ ಸಮಿತಿಯೊಂದನ್ನು ರಚಿಸಲಾ ಗಿದೆ. ಈ ದಿಶೆಯಲ್ಲಿ ಸಲಹೆ-ಸೂಚನೆ ಕಳಿಸಲು, ತಮ್ಮ ಆಲೋಚನೆ ಯೋಜನೆ ಮುಂದಿಡಲು ಎಲ್ಲರಿಗೂ ಅವಕಾಶವಿದೆ. ಪ್ರತಿಯೊಬ್ಬ ಚಿಂತನಶೀಲರೂ ತಮ್ಮ ತಮ್ಮ ವಿಚಾರಗಳನ್ನು ಬರೆದು ತಿಳಿಸಬಹುದು.

ಪ್ರಥಮ ಶರಣ ಮೇಳದ ಯಶಸ್ಸು ಕುರಿತು.

ವಿಶ್ವಗುರು ಬಸವಣ್ಣನವರ ನಂತರದ 800 ವರ್ಷಗಳ ಬಳಿಕ ಸಮಾವೇಶವಾದ ಬೃಹತ್ ಶರಣ ಮೇಳವು ಒಂದು ಅಪೂರ್ವ ಸಾಧನೆ. 1988ನೇ ಇಸವಿ ಜನವರಿ 14, 15 ಮತ್ತು 16 ರಂದು ನಡೆದ ಪ್ರಥಮ ಚಾರಿತ್ರಿಕ ಸಮಾವೇಶವು ಅಪೂರ್ವ ಯಶಸ್ಸು ಕಂಡಿತು. ಮೊದಲನೆಯ ವರ್ಷಕ್ಕೆ ಐವತ್ತು ಸಾವಿರ ಜನರು ಸೇರಿದರೂ ಪ್ರಶಂಸಾರ್ಹವೇ ಎಂದು ಭಾವಿಸಿದ್ದ ನಮಗೆಲ್ಲರಿಗೂ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಜನರು ಸೇರಿದಾಗ ಆನಂದ ಆಶ್ಚರ್ಯ ಒಟ್ಟಿಗೆ ಉಂಟಾದವು, ಬಸವ ತತ್ತ್ವಾನು ಯಾಯಿಗಳೆಲ್ಲರ ಹೃದಯದಲ್ಲಿ ಈ ಒಂದು ಆಸೆ ಅಂತರ್ಗತವಾಗಿ ಸುಪ್ತವಾಗಿ ಇದ್ದಿದ್ದು, ಇದೀಗ ಪ್ರಕಟವಾಯಿತೇನೋ ಎಂದೆನಿಸಿತು. ಬಸವ ತತ್ತ್ವಾನುಯಾಯಿಗಳು ಒಂದು ಧರ್ಮ ಕ್ಷೇತ್ರದಲ್ಲಿ, ವರ್ಷಕ್ಕೊಮ್ಮೆಯಾದರೂ ಸೇರಬೇಕೆಂಬ ಹಂಬಲ ಸ್ಪಷ್ಟವಾಗಿ ಅಭಿವ್ಯಕ್ತವಾಯಿತು. ಯಾವ ಹಣಕಾಸಿನ ವ್ಯವಸ್ಥೆಯೂ ಇಲ್ಲದೆ ಅಭಿಮಾನ ಮತ್ತು ದೃಢ ಸಂಕಲ್ಪದಿಂದ ಶರಣ ಮೇಳದ ಯೋಜನೆ ಮೊದಲ ವರ್ಷ ಆರಂಭವಾದ್ದರಿಂದ ಶುಲ್ಕ ನೀಡಿದ ಪ್ರತಿನಿಧಿಗಳು, ದಾನಿಗಳು, ಆಮಂತ್ರಿತರು ಮುಂತಾದವರಿಗೆ ಮಾತ್ರ ಊಟ-ವಸತಿಗಳ ವ್ಯವಸ್ಥೆಯ ಜವಾಬ್ದಾರಿ ಹೊರಬೇಕೆಂದು ಶರಣ ಮೇಳ ಉತ್ಸವ ಸಮಿತಿ ನಿರ್ಧರಿಸಿತ್ತು. ಆದರೆ ಜನರಿಂದ ಅಕ್ಕಿ, ರೊಟ್ಟಿ ಮುಂತಾದವುಗಳು ಒಳ್ಳೆಯ ಪ್ರಮಾಣದಲ್ಲಿ ಬರತೊಡಗಿದ್ದರಿಂದ, ಉಚಿತ ದಾಸೋಹದ ವ್ಯವಸ್ಥೆ ಮಾಡಲಾಯಿತು. ಉಚಿತ ದಾಸೋಹದ ನಿರ್ಧಾರವನ್ನು ಕೊನೆಗಳಿಗೆಯಲ್ಲಿ ತೆಗೆದುಕೊಂಡಿದ್ದರಿಂದಲೂ ಮತ್ತು ಜನ ಪ್ರ/13 ಾಹ ಅಂದಾಜಿಗೆ ಮೀರಿ ಬಂದುದರಿಂದಲೂ ಕಾರ್ಯಕರ್ತರಿಗೆ ಪರಿ ಶ್ರಮ ವಿಪರೀತವಾಯಿತು. ಆದರೂ ಚಿಂತೆಯಿಲ್ಲ, ಕೆಲವು ಶರಣರು ಊಟ-ನಿದ್ರೆ- ಕಾರ್ಯಕ್ರಮದ ಪರಿವೆ ಇಲ್ಲದೆ ದುಡಿದುದರಿಂದ ಶರಣ ಮೇಳ ನಿಜಕ್ಕೂ ಯಶಸ್ವಿ ಯಾಯಿತು.

ಐದನೆಯ ಶರಣ ಮೇಳವು 1992ನೆಯ ಇಸವಿಯ ಜನವರಿ 12, 13, 14 ಮತ್ತು 15 ರಂದು ನಡೆಯಲಿದ್ದು, ಇದೆಲ್ಲಕ್ಕೂ ಜನರ ಸಹಕಾರ ಅತ್ಯಗತ್ಯ ಎಂದು ಬೇರೆ ಹೇಳಬೇಕಾಗಿಲ್ಲವಷ್ಟೇ.

1992ರ ಜನವರಿಯ ಶರಣ ಮೇಳದಲ್ಲಿ ಯೋಜಿಸುವ ಕೆಲವು ಕಾರ್ಯಕ್ರಮಗಳ ಸ್ಥೂಲ ರೂಪುರೇಷೆ

ಭಾನುವಾರ ದಿ. 12-1-1992 ರಂದು

1. ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭ. ಬಸವ ಧರ್ಮ ಸಂಸತ್ ಸದಸ್ಯರ ಸಮಾವೇಶ. ಬಸವ ಧರ್ಮ ಪೀಠ ಸ್ಥಾಪನೆ ಕುರಿತು ಮತ್ತು ಬಸವ ಧರ್ಮ

ಸಂಸತ್ ಸದಸ್ಯರ ಕರ್ತವ್ಯ ಕುರಿತು ಮಹತ್ವದ ಚರ್ಚೆ ಮತ್ತು ನಿರ್ಣಯಗಳು.

2. ಸಂಜೆ 5ಕ್ಕೆ ಐದನೆಯ ಶರಣ ಮೇಳ ಉದ್ಘಾಟನೆ.

ಸೋಮವಾರ ದಿ. 13–1–1992 ರಂದು

1. ಬೆಳಿಗ್ಗೆ 8ಕ್ಕೆ ಬಸವೇಶ್ವರ ಪೂಜಾವ್ರತ.
2. ಬೆಳಿಗ್ಗೆ 9–45ಕ್ಕೆ ಬಸವ ಧ್ವಜಾರೋಹಣ.
3. ಬೆಳಿಗ್ಗೆ 10 ಕ್ಕೆ ಧರ್ಮ ಪೀಠಾರೋಹಣ ಕಾರ್ಯಕ್ರಮ ಆರಂಭ.
4. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರಿಗೆ ಅಂತರರಾಜ್ಯ ಮಟ್ಟದ ಅಭಿನಂದನ ಸಮಾರಂಭ.
5. ಮಧ್ಯಾಹ್ನ 5 ರಿಂದ 8ರ ವರೆಗೆ ಧರ್ಮ ಚಿಂತನಗೋಷ್ಠಿ.
6. ದಾನಿಗಳಿಗೆ ಸತ್ಕಾರ.
7. ರಾತ್ರಿ 9ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ.

ಮಂಗಳವಾರ ದಿ. 14–1–1992 ರಂದು ಬಸವ ಕ್ರಾಂತಿ ದಿನಾಚರಣೆ

1. ಬೆಳಿಗ್ಗೆ 8-30ಕ್ಕೆ ಶ್ರೀ ಬಸವೇಶ್ವರ ಐಕ್ಯ ಮಂಟಪದಲ್ಲಿ ವಿಶೇಷ ಪೂಜೆ ಮತ್ತು ಸಭಾಮಂಟಪದವರೆಗೆ ಪಾದಯಾತ್ರೆ. ಸಾಮೂಹಿಕ ಪಥ ಸಂಚಲನದೊಡನೆ ಆಗಮನ, ಷಟಸ್ಥಲ ಬಸವ ಧ್ವಜ ಪ್ರತಿಷ್ಠಾಪನೆ.
2. ಬೆಳಿಗ್ಗೆ 10ಗಂಟೆಗೆ ಸಮುದಾಯ ಪ್ರಾರ್ಥನೆಯ ಉದ್ಘಾಟನೆ ಮತ್ತು ಸಮುದಾಯ ಪ್ರಾರ್ಥನೆ. ನಂತರ ಬಸವ ರಕ್ಷಾಬಂಧನ, ಎಳ್ಳು-ಬೆಲ್ಲಗಳ ಪರಸ್ಪರ ವಿತರಣೆ, ಪ್ರತಿಜ್ಞಾವಿಧಿ.
3. ಮಧ್ಯಾಹ್ನ 4 ರಿಂದ 7 ರವರೆಗೆ ತತ್ತ್ವಚಿಂತನ ಗೋಷ್ಠಿಯಲ್ಲಿ ಉಪನ್ಯಾಸ.
4. ರಾತ್ರಿ 9 ರಿಂದ ಸಾಂಸ್ಕೃತಿಕ ಕಾರ್ಯಕ್ರಮ.

ಬುಧವಾರ 15–1–1992 ರಂದು

1. ಸುಪ್ರಭಾತದಲ್ಲಿ 7 ರಿಂದ 9 ಗಂಟೆಯವರೆಗೆ ಸಾಮೂಹಿಕ ಇಷ್ಟಲಿಂಗ ಪೂಜೆ.
2. ಮಧ್ಯಾಹ್ನ 11 ಗಂಟೆಯಿಂದ 3 ರವರೆಗೆ ರಾಷ್ಟ್ರೀಯ ಬಸವ ದಳಗಳ, ಮಹಾಧಿವೇಶನ ಮತ್ತು ಸಮಾರೋಪ.

ಕಾರ್ಯಕ್ರಮಗಳಲ್ಲಿ ಅನೇಕ ಮಠಾಧೀಶರು, ಧರ್ಮಗುರುಗಳು, ಸಾಮಾಜಿಕ-ರಾಜಕೀಯ ನೇತಾರರು ಭಾಗವಹಿಸಿ ಉಪನ್ಯಾಸ ಮಾಡುವರು.

ಕೆಲವು ವಿಶೇಷ ಕಾರ್ಯಕ್ರಮಗಳು

ಕೂಡಲ ಸಂಗಮದ ಮಹಾಮನೆಯ ಬಸವೇಶ್ವರ ಮಂಟಪದಲ್ಲಿ ದಿನಾಂಕ 9-1-1992 ರಿಂದ ವಚನ ಸಾಹಿತ್ಯದ ಅಖಂಡ ವಚನ ಪಠಣವು ಪ್ರಾರಂಭವಾಗಿ, ದಿ.16-1-1992 ರಂದು ಮಂಗಲಗೊಳ್ಳುವುದು. ಈ ಪಠಣ ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತರು ಮೊದಲಿಗೇ ಬರಬೇಕು.

ಬಸವ ಧರ್ಮ ಸಂಸತ್ ಸಭೆ

ಭಾನುವಾರ, ದಿ. 12–1–1992 ಬೆಳಿಗ್ಗೆ 10-30ಕ್ಕೆ

ಬಸವ (ಲಿಂಗಾಯತ) ಧರ್ಮಾನುಯಾಯಿಗಳು, ಬಸವ ತತ್ತ್ವಾನುಯಾಯಿಗಳು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಮುಂತಾದ ಸಮಸ್ಯೆಗಳನ್ನು ಚರ್ಚಿಸಲೋಸುಗ ಬಸವ ಧರ್ಮ ಸಂಸತ್ ಅನ್ನು ಪ್ರಾರಂಭಿಸಲಾಯಿತು. 12-1-1989 ರಲ್ಲಿ 52 ಜನರನ್ನು ಆಯ್ಕೆ ಮಾಡಲಾಗಿದ್ದು, ಹಂತಹಂತವಾಗಿ ಸದಸ್ಯರ ಸಂಖ್ಯೆಯನ್ನು ಏರಿಸಿ, ಇದೀಗ 151 ಜನ ಸದಸ್ಯರನ್ನು ನಾಮಕರಣ ಮಾಡಲಾಗಿದೆ. ಈ ಸದಸ್ಯರು ಸಭೆ ಸೇರಿ ಕೆಲವಾರು ವಿಷಯಗಳನ್ನು ಚರ್ಚಿಸಲಿರುವರು.

1. ಬಸವ ಧರ್ಮ ಪೀಠ ಸ್ಥಾಪನೆ, ನಿಯಮಾವಳಿ, ಪೀಠಾಧಿಕಾರಿಯ ಆಯ್ಕೆಯ ವಿಧಾನ. ಇತ್ಯಾದಿ.
2. ಬಸವ ಧರ್ಮ ಸಂಸತ್ ಸದಸ್ಯರ ಕರ್ತವ್ಯ, ಅವರ ನಂಬಿಕೆ, ಪ್ರತಿಜ್ಞಾವಿಧಿ.
3. ರಾಷ್ಟ್ರೀಯ ಬಸವ ದಳಗಳ ಕರ್ತವ್ಯ, ಸಂಘಟನೆ.
4. ಮೂಢನಂಬಿಕೆ, ಪ್ರಾಣಿ ಬಲಿ ಮುಂತಾದುವುಗಳ ಬಗ್ಗೆ ಪ್ರತಿಭಟನಾ ಯೋಜನೆ.
5. ಸದಸ್ಯರ ಸೂಚನೆ ಮೇರೆಗೆ ಇನ್ನೂ ಕೆಲ ವಿಷಯ ಚರ್ಚಿಸಬಹುದು.

ಬಸವ ಧರ್ಮ ಪೀಠ ಸ್ಥಾಪನೆ

ವಿಶ್ವಗುರು ಬಸವಣ್ಣನವರು ಧರ್ಮದ ಆದ್ಯ ಪುರುಷರಾಗಿ, ಎಲ್ಲರ ಹೃದಯಗಳ ಪೀಠದಲ್ಲಿ ನೆಲೆ ನಿಂತು, ತೊಳಗಿ ಬೆಳಗುವ ಪರಂಜ್ಯೋತಿಯಾದರು. ನವ ಧರ್ಮ ದ್ರಷ್ಟಾರರಾದರು. ಆಚಾರ–ಅರಿವು–ಅನುಭಾವಗಳಿಂದ ಯಾರು ಬೇಕಾದರೂ ಗುರು-ಜಂಗಮ-ಪೀಠಾಧೀಶರಾಗಬಲ್ಲರು ಎಂಬುದನ್ನು ಸಾರಲೋಸುಗ ಶೂನ್ಯಪೀಠವನ್ನು ಅನುಭವ ಮಂಟಪದಲ್ಲಿ ಸ್ಥಾಪಿಸಿ, ಅಲ್ಲಮ ಪ್ರಭುವನ್ನು ಪ್ರಥಮ ಅಧಿಕಾರಿಯನ್ನಾಗಿ ಮಾಡಿದರು. ಗುರು ಬಸವಣ್ಣನವರು ಅಪ್ರತಿಮ ವ್ಯಕ್ತಿತ್ವ ಉಳ್ಳವರಾಗಿ, ಮಂತ್ರ ಪುರುಷರಾಗಿ ಗೌರವಿಸಲ್ಪಟ್ಟಿರುವರಾದರೂ ಅವರ ಹೆಸರಿನಲ್ಲಿ ಪೀಠವೊಂದರ ಸ್ಥಾಪನೆಯ ಅಗತ್ಯವಿದ್ದಿತಾದರೂ ಈವರೆಗೂ ಅದು ಆಗಿಲ್ಲ. ವಿದ್ಯಾಸಂಸ್ಥೆ, ಶಾಲೆ ಕಾಲೇಜು, ಮನೆ–ಅಂಗಡಿ ಮುಂತಾದುವುಗಳಿಗೆ ಗುರು ಬಸವಣ್ಣನವರ ಹೆಸರನ್ನಿಡುವ ಪರಿಪಾಠವಿದೆಯಾದರೂ, ಧರ್ಮಪೀಠವೊಂದು ಧರ್ಮಪಿತನ ಹೆಸರಿನಲ್ಲಿ ಸಾಗಿಬರುವುದು ತೀರಾ ಅತ್ಯವಶ್ಯಕ ಎಂದರಿತು ಇದೀಗ ಐದನೆಯ ಶರಣ ಮೇಳದ ಸುಸಮಯದಲ್ಲಿ ಬಸವಣ್ಣನವರ ಹೆಸರಿನಲ್ಲಿ ಗುರುಪೀಠವೊಂದನ್ನು ಸ್ಥಾಪಿಸಲಾಗುತ್ತಿದೆ.

ಬಸವ ಧರ್ಮ ಪೀಠದ ಪ್ರಥಮ ಅಧಿಕಾರಿಯನ್ನಾಗಿ ಪರಮ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರನ್ನು, ದಿ. 26–10–1991 ರಂದು ಸೇರಿದ ಬಸವ ಧರ್ಮ ಸಂಸತ್ ಸದಸ್ಯರ ಸಭೆಯು ಒಮ್ಮತದ ಆಯ್ಕೆ ಮಾಡಿದ್ದು, ಸೋಮವಾರ ದಿ. 13-1-1992 ರಂದು ಶ್ರೀಗಳು ಪೀಠಾರೋಹಣ ಮಾಡಲಿದ್ದಾರೆ.

ಧನ ಸಹಾಯಕ್ಕೆ ಮನವಿ

ಮೊದಲನೆಯ ಶರಣ ಮೇಳವೇ ಎರಡೂವರೆ ಲಕ್ಷಕ್ಕೂ ಮಿಕ್ಕಿ ಜನರನ್ನು ಆಕರ್ಷಿಸಿತು. ವರ್ಷದಿಂದ ವರ್ಷಕ್ಕೆ ಶರಣ ಮೇಳವು ಇದಕ್ಕೂ ಹೆಚ್ಚಿನ ಶರಣರನ್ನು ಆಕರ್ಷಿಸುವ ಅಂದಾಜಿದೆಯಲ್ಲದೆ, ವಿವಿಧ ರಾಜ್ಯಗಳಿಂದಲೂ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರಲಿರುವರು. ಆದ್ದರಿಂದ ಶರಣ ಮೇಳವು ಯಶಸ್ವಿಯಾಗಬೇಕಾದರೆ ಹಿಂದಿನ ಲೋಪಗಳನ್ನು, ಅನಾನುಕೂಲತೆಗಳನ್ನು ಸರಿಪಡಿಸಿಕೊಂಡು ಉತ್ಸವ ಸಮಿತಿಯು ಕಾರ್ಯ ಮಾಡಬೇಕು. ದಾನಿಗಳು, ಮಹಾಜನತೆ ಉದಾರಮನಸ್ಸಿನಿಂದ ದೇಣಿಗೆ ಕೊಡಲು ಮುಂದಾಗಬೇಕು.

ಮಹಾಪೋಷಕರು	10,000 ರೂ	ಮತ್ತು ಮೇಲೆ ಕೊಟ್ಟವರು
ಪೋಷಕರು	5,000 ರೂ	,, ,,
ದಾನಿಗಳು	1,000 ರೂ	,, ,,
ಹಿತೈಷಿಗಳು	500 ರೂ	,, ,,
ಸ್ವಾಗತ ಸಮಿತಿ ಸದಸ್ಯರು	125 ರೂ	
ಪ್ರತಿನಿಧಿ ಶುಲ್ಕ	100 ರೂ	

ಪ್ರತಿನಿಧಿ ಶುಲ್ಕ ಕೊಟ್ಟವರಿಗೆ ನಾಲ್ಕು ದಿವಸಗಳ ಕಾಲ ಊಟ ಮತ್ತು ವಸತಿಯ ಸೌಕರ್ಯ ನೀಡಲಾಗುವುದು. ಸ್ವಾಗತ ಸಮಿತಿಯ ಸದಸ್ಯತ್ವ 125 ರೂ ಕೊಟ್ಟರೆ ಒಬ್ಬರಿಗೆ ಮಾತ್ರ ಅವಕಾಶ. ವ್ಯಕ್ತಿಗಳಿಗಾಗಿ ಮಾಡುವ ವ್ಯವಸ್ಥೆಗಾಗಿ ಒಬ್ಬರಿಗೆ 85 ರೂ. ವೆಚ್ಚವಾಗುತ್ತದೆ. ಇನ್ನು 40 ರೂಗಳನ್ನು ಅವರು ಕಾರ್ಯಕ್ರಮದ ವ್ಯವಸ್ಥೆಗೆ ಕೊಟ್ಟಂತಾಗಿರುತ್ತದೆ. ಆದ್ದರಿಂದ ರಸೀತಿ ಬರೆಸುವಾಗಲೇ ಸ್ಪಷ್ಟವಾಗಿ ಬರೆಸಬೇಕು. 125 ರೂ. ಕ್ಕಿಂತ ಮೇಲೆ ಹಣ ಕೊಡುವ ದಾನಿಗಳು ತಮಗಿಷ್ಟವಿದ್ದರೆ 125 ರೂ. ಒಬ್ಬರಂತೆ ಬರಲು ಅನುಮತಿ ನೀಡಲಾಗುವುದು.

ಭಜನಾ ತಂಡದವರು, ಕಾರ್ಯಕರ್ತರು ಮುಂತಾದವರಿಗೆ ಉಚಿತ ದಾಸೋಹದ ವ್ಯವಸ್ಥೆ ಇರುತ್ತದೆ. ಆದರೆ ಅವರು ಕಾರ್ಯಾಲಯದಲ್ಲಿ ತಮ್ಮ ತಂಡದ ವಿವರಗಳನ್ನು ನೀಡಿ ಬ್ಯಾಡ್ಜಸ್ ಪಡೆಯಬೇಕು. ಹಣವನ್ನು ಕಳಿಸುವವರು "ಶರಣ ಮೇಳ ಉತ್ಸವ ಸಮಿತಿ" [Sharana Mela Utsava Samithi] ಎಂದು ಬರೆದು ಡ್ರಾಫ್ಟ್, ಚೆಕ್ಕು, ಎಂ. ಓ, ನಗದಾಗಿ ಕಳಿಸಬೇಕು. ಮುಂದೆ ಕಾಣಿಸಿರುವ ಎರಡೂ ವಿಳಾಸಗಳಿಗೆ ಕಳಿಸಬಹುದು.

ಐದನೆಯ ಶರಣ ಮೇಳಕ್ಕೆ ವಿಶೇಷ ಮನವಿ

ಇಡೀ ಸಮಾಜದ ಸಂಘಟನೆ ಮತ್ತು ಸಂಸ್ಕಾರಕ್ಕೆ ಕಾರಣೀಭೂತವಾಗುವ 'ಶರಣ ಮೇಳ'ವು ಸಮಾಜದ ಎಲ್ಲರ ಹೊಣೆಗಾರಿಕೆ, ಕಾರ್ಯಕರ್ತರು ಎರಡನೆ ಶರಣ ಮೇಳದ ನಿರ್ವಹಣೆಗೆ ಧನ ಸಂಗ್ರಹ ಮಾಡುವಲ್ಲಿ ಆಲಸ್ಯ ತೋರಿಸಿದ್ದರಿಂದ ಬಸವ

ಧರ್ಮ ಪೀಠ ಸಂಸ್ಥೆಯ ಮೇಲೆ ಒಂದು ಲಕ್ಷ ಮೂವತ್ತು ಸಾವಿರಕ್ಕೂ ಮಿಕ್ಕಿ ಆರ್ಥಿಕ ಹೊಣೆಬಿದ್ದಿತು. ಇದರಿಂದಾಗಿ ಕಟ್ಟಡ ನಿಧಿಗೆಂದು ಬಸವ ಧರ್ಮ ಪೀಠಕ್ಕೆ ಸಂಗ್ರಹಿಸಿದ ಹಣವನ್ನೇ ವೆಚ್ಚ ಮಾಡಲಾಗಿದೆ. ಆದ್ದರಿಂದ ಶರಣ ಮೇಳ ಉತ್ಸವ ಸಮಿತಿಯು ಕೈಗಡವಾಗಿ ಪಡೆದ ಹಣವನ್ನು ವಾಪಸ್ಸು ಮಾಡಬೇಕಾದ ಕರ್ತವ್ಯ ಹೊಂದಿರುವದೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಾರ್ಯಕರ್ತರು ಧನಸಂಗ್ರಹ ಮಾಡಬೇಕೆಂದು ಕೋರುವೆವು.

ಕಾರ್ಯಕರ್ತರಿಗೆ ವಿಶೇಷ ಸೂಚನೆಗಳು

ನಾಲ್ಕೂ ಶರಣ ಮೇಳಗಳ ಅಪೂರ್ವಯಶಸ್ಸಿಗೆ ಅನೇಕ ಜನ ಬಸವ ಶರಣರು ಅಹರ್ನಿಶೆ ದುಡಿದುದೇ ಕಾರಣ ಎಂಬುದನ್ನು ಸ್ಮರಿಸದಿದ್ದರೆ ಕರ್ತವ್ಯಲೋಪವಾದೀತು. ಪ್ರತ್ಯೇಕವಾಗಿ ಅವರುಗಳ ಹೆಸರು ಕಾಣಿಸಲು ಆಗುತ್ತಿಲ್ಲ. ಆದರೆ ಕೆಲವರು ಕೆಲವು ಲೋಪಗಳನ್ನು ಮಾಡಿದುದರಿಂದ ಉತ್ಸವ ಸಮಿತಿಯವರಿಗೆ ವ್ಯವಸ್ಥೆ ಮಾಡಲು ತೊಂದರೆಯಾಯಿತಲ್ಲದೆ, ಅಪವಾದಗಳೂ ಬಂದವು.

1. ಶರಣ ಮೇಳ ಉತ್ಸವ ಸಮಿತಿಯು ಪ್ರತಿನಿಧಿ ಶುಲ್ಕ ಸಲ್ಲಿಸಿದವರು, ಸ್ವಾಗತ ಸಮಿತಿ ಸದಸ್ಯರು, ದಾನಿಗಳು ಮುಂತಾದವರ ಊಟ-ವಸತಿಯ ಸೌಲಭ್ಯ ಒದಗಿಸುವ ಉದ್ದೇಶದಿಂದ ಅವರಿಗೆ ಸೂಚನಾ ಪತ್ರ ಕಳಿಸಲು ಪತ್ರಗಳನ್ನು ಮುದ್ರಿಸಿತ್ತು. ಆದರೆ ಕಾಣಿಕೆ ಸಂಗ್ರಹ ಮಾಡಿದ ಪ್ರತಿನಿಧಿಗಳು ಕೆಳಗಿನ ಲೋಪಮಾಡಿದ್ದರು.
   - ಅ) ಅಂಚೆಯಲ್ಲಿ ವ್ಯವಹರಿಸಲು ಪೂರ್ಣವಿಳಾಸವನ್ನೇ ಬರೆದುಕೊಂಡಿರಲಿಲ್ಲ.
   - ಆ) ಹಣಕೊಟ್ಟವರ ಹೆಸರು–ವಿಳಾಸಗಳನ್ನು ಕಾರ್ಯಾಲಯಕ್ಕೆ ಸಕಾಲದಲ್ಲಿ ಕಳಿಸಲಿಲ್ಲ.
2. ಜನರಿಂದ ಪಡೆದ ಹಣವನ್ನು ಮತ್ತು ಹೆಸರುಗಳ ಯಾದಿಯನ್ನು ಕಾಲಕಾಲಕ್ಕೆ ಕಳಿಸಿಕೊಡದ್ದರಿಂದ ಆ ಹಣ ಕೊಟ್ಟವರಿಗೆ ಸೂಚನಾ ಪತ್ರ-ಆಮಂತ್ರಣ ಪತ್ರ ಕಳಿಸಲು ಆಗಲಿಲ್ಲ.
3. ಹಣ ಪಡೆದುಕೊಳ್ಳುವಾಗ ಕೊಟ್ಟ ಪಾವತಿ (ರಸೀತಿ) ಯನ್ನು ತಪ್ಪದೆ ಜೊತೆಗೆ ತೆಗೆದುಕೊಂಡು ಬರಬೇಕು ಎಂದು ಹಣ ಸಂಗ್ರಹಿಸಿದ ಕಾರ್ಯಕರ್ತರು ಸೂಚಿಸಿರಲಿಲ್ಲ. ಹೀಗಾಗಿ ಅನೇಕರು ಕೂಡಲ ಸಂಗಮಕ್ಕೆ ಬಂದಾಗ ಪಾವತಿ ತರದೆ ತಾವು ಅಲ್ಲಿ ಕೊಟ್ಟಿದ್ದೆವು ಎಂದೆಲ್ಲ ತಕರಾರು ಮಾಡಲು ಅವಕಾಶವಾಯಿತು.

ಉಚಿತ ದಾಸೋಹದ ವ್ಯವಸ್ಥೆಯನ್ನು ಮಾಡಿದ್ದರಿಂದ ಎಲ್ಲರಿಗೂ ಸಾಮೂಹಿಕವಾಗಿ ಕೊಡಲಾಯಿತು. ಆದರೆ ವಸತಿ ವ್ಯವಸ್ಥೆಯು ಶುಲ್ಕ ಕೊಟ್ಟವರಿಗೆ ಮಾತ್ರ ಇದ್ದುದರಿಂದ ಬಂದ ಜನರು ರಸೀತಿ ತರದ್ದರಿಂದ ವ್ಯವಸ್ಥಾಪಕರಿಗೆ ತೊಂದರೆಯಾಯಿತು.

4. ಕೆಲವರು ಕಾರ್ಯಕ್ರಮ ಪ್ರಾರಂಭವಾಗುವ ಹಿಂದಿನ ದಿವಸದ ತನಕ ಹೆಸರುಗಳ ಯಾದಿಯನ್ನು, ಅಕ್ಕಿ ಮುಂತಾದ ಪದಾರ್ಥಗಳನ್ನು ಕೊಟ್ಟ ದಾನಿಗಳ ಹೆಸರನ್ನು ಒದಗಿಸಲಿಲ್ಲ. ಇದರಿಂದಾಗಿ ಅವರಿಗೆ ಸೂಚನೆಗಳನ್ನು ಕಳಿಸಲು ಆಗಲೇ ಇಲ್ಲ.

ಈ ಎಲ್ಲ ಅನಾನುಕೂಲತೆಗಳನ್ನು ಈ ಸಲ ಸರಿಪಡಿಸಬೇಕಾದರೆ ಕಾರ್ಯಕರ್ತರು ಹಣಕೊಟ್ಟವರ ಪೂರ್ಣವಿಳಾಸ ಪಡೆದುಕೊಳ್ಳಬೇಕು, ಹಣವನ್ನು ಸಂಗ್ರಹಿಸಿದಂತೆಲ್ಲ ಆ ಹಣವನ್ನು, ಯಾದಿಯನ್ನು ಕಾರ್ಯಾಲಯಕ್ಕೆ ಕಳಿಸುತ್ತಾ ಹೋಗಬೇಕು. ಕೇವಲ ಧನರೂಪದಲ್ಲಿ ಸಹಾಯ ಮಾಡಿದವರಿಗಷ್ಟೇ ಅಲ್ಲ ಅಕ್ಕಿ, ಜೋಳ ಎಣ್ಣೆ ಮುಂತಾದ ಪದಾರ್ಥ ಕೊಟ್ಟವರಿಗೂ ರಸೀತಿ ಕೊಡಬೇಕು.

ವಿವರಗಳ ಯಾದಿಯ ಒಂದು ಪ್ರತಿಯನ್ನು ತಮ್ಮ ಬಳಿಯೂ ಇಟ್ಟುಕೊಳ್ಳಬೇಕು. ಹಣ ಪಡೆದುಕೊಂಡಾಗ ಕೊಟ್ಟವರಿಗೆ ರಸೀತಿಯನ್ನು ಜೋಪಾನವಾಗಿಟ್ಟು ಕಾರ್ಯಕ್ರಮಕ್ಕೆ ಬಂದಾಗ ತೋರಿಸಲು ಸೂಚಿಸಬೇಕು, ಹಾಗೆ ರಸೀತಿ ತರದೆ ತಾವು ಎಷ್ಟೆಷ್ಟೋ ಕಾಣಿಕೆ ಕೊಟ್ಟುದಾಗಿ ಕಾರ್ಯಾಲಯಗಳನ್ನು ನೋಡಿಕೊಳ್ಳುವವರ ಜೊತೆ ವಾಗ್ವಾದಕ್ಕೆ ಇಳಿದರೆ ಏನ ಪ್ರಯೋಜನವಾಗದು.

ಸಾರಿಗೆ ಸಂಸ್ಥೆಯ ವಾಹನ ವ್ಯವಸ್ಥೆ

ಪ್ರತಿವರ್ಷವೂ ಕರ್ನಾಟಕ ರಾಜ್ಯ ರಸ್ತೆ ಸಾರಿಗ್ಯೆ ಸಂಸ್ಥೆಯು ರಾಜ್ಯದಾದ್ಯಂತ ಇರುವ ಡಿಪೋಗಳಿಂದ ಕೂಡಲ ಸಂಗಮಕ್ಕೆ ಬಸ್ಸಿನ ವ್ಯವಸ್ಥೆ ಮಾಡುವುದು. ಆಯಾ ಡಿಪೋಗಳಿಂದ ಎಷ್ಟು ಜನ ಹೊರಡುವರೋ ಅಷ್ಟು ಜನರ ಯಾದಿ ಸಿದ್ಧಪಡಿಸಿ ಬಸ್‌ಗಳನ್ನು ಒದಗಿಸಿಕೊಂಡರೆ ಬಹಳ ಒಳ್ಳೆಯದಾಗುತ್ತದೆ. ಆದರೆ ಜನರು ಬೇಗನೆ ನಿರ್ಧಾರ ತೆಗೆದುಕೊಳ್ಳದೆ ಕಡೆಯ ಕ್ಷಣಗಳಲ್ಲಿ ಯತ್ನಿಸಿದಾಗ ಬಸ್ಸಿನ ಅನುಕೂಲತೆ ಒದಗದೆ ತುಂಬಾ ನಿರಾಶರಾಗಿರುತ್ತಾರೆ. ಆದ್ದರಿಂದ ಕಾರ್ಯಕರ್ತರು ಸಮೀಪದ ಬಸ್ ಡಿಪೋ ಅಧಿಕಾರಿಗಳನ್ನು ಬೇಗನೆ ಕಂಡು ಸಿದ್ಧತೆ ಮಾಡಿಕೊಳ್ಳಬೇಕು.

ಮತ್ತೆ ಕೆಲವು ಜನರು ಪ್ರವಾಸದ ಉದ್ದೇಶ ಹೊತ್ತು ಖಾಸಗಿ ಬಸ್ಸಿನಲ್ಲಿ ಬಂದು ಶರಣ ಮೇಳದಲ್ಲಿ ಸ್ವಲ್ಪ ಕಾಲ ಇಣುಕಿ ನೋಡಿ ಗಡಿಬಿಡಿಯಿಂದ ಊರು ಸುತ್ತುತ್ತಾ ಹೊರಟು ಹೋಗುವರು. ಇನ್ನೂ ತಾತ್ವಿಕ ಅಭಿರುಚಿ, ಚಿಂತನ ಶೀಲತೆ ಬೆಳೆಸಿಕೊಳ್ಳಲು ಅಸಮರ್ಥವಾಗಿರುವ ನಮ್ಮ ಜನರಲ್ಲಿ ಇದು ಸ್ವಾಭಾವಿಕ ನಡೆ! ಆದರೆ ಶರಣ ಮೇಳ ಕೇವಲ ಒಂದು ಜಾತ್ರೆಯಲ್ಲ, ಉಪನ್ಯಾಸಗಳ ಕಡೆಗೇ ಗಮನವಿಟ್ಟ ಸಮ್ಮೇಳನವಲ್ಲ ; ಪವಿತ್ರ ಧಾರ್ಮಿಕ ವಿಧಿ ಎಂಬ ಭಾವದಿಂದ ಹಜ್ ಯಾತ್ರೆಯನ್ನು ಮುಸ್ಲೀಮರು ಕೈಗೊಂಡಂತೆ, ಸಮುದಾಯ ಪ್ರಾರ್ಥನೆ-ಪ್ರತಿಜ್ಞಾವಿಧಿ, ಸಾಮೂಹಿಕ ಇಷ್ಟಲಿಂಗ ಪೂಜೆ ಮತ್ತು ಪೌಢ ಚಿಂತನೆಗಳಲ್ಲಿ ಮೂರೂ ದಿವಸಗಳ ಕಾಲ ಉಪಸ್ಥಿತರಿರಲು ಸಾಧ್ಯವಿರುವಂತೆ ಸಮಯವನ್ನು ಇರಿಸಿಕೊಳ್ಳಬೇಕು. ಆದ್ದರಿಂದ ಬಸವ ಕ್ರಾಂತಿ ದಿನ(ಸಂಕ್ರಾಂತಿ)ದಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಸಮುದಾಯ ಪ್ರಾರ್ಥನೆ ಮತ್ತು ಮರುದಿನ ಬೆಳಿಗ್ಗೆ ನಡೆಯುವ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ತಪ್ಪದೆ ಭಾಗವಹಿಸುವ ಪರಿಪಾಠ ಬೆಳೆಸಿಕೊಳ್ಳಬೇಕೆಂದು ಸೂಚಿಸುವೆವು.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ–587115, ತಾ- ಹುನಗುಂದ, ಜಿಲ್ಲ- ಬಿಜಾಪುರ.

(8ನೆ ಪುಟದಿಂದ ಮುಂದುವರಿದಿದೆ)

ಸರ್ಕಾರದ ಕಾಯ್ದೆ ಪ್ರಕಾರ ದೇವರ ಹೆಸರಿನಲ್ಲಿ ಬಲಿಯು ಶಿಕ್ಷಾರ್ಹ ಅಪರಾಧ. ಇದನ್ನು ಮಾಡಿದವರನ್ನು ಬಂಧಿಸಲಾಗುವುದು ಎನ್ನುತ್ತಲೇ ಉಗ್ರವಾದೀ ಮೂಢ ಭಕ್ತರ ಆವೇಶ ಇಳಿಯಿತು. "ಕಡಿಯದಿದ್ದರೆ ಕೆಡುಕಾಗುವುದು; ರೂಢಿಗೊಂಡ ಸಂಪ್ರದಾಯದ ಉಲ್ಲಂಘನೆಯಾಗುವುದು." ಮುಂತಾಗಿ ವ್ಯಕ್ತಪಡಿಸಿದ ಸಂದೇಹಗಳಿಗೆ ದಯಾನಂದ ಸ್ವಾಮಿಗಳು ಧಾರ್ಮಿಕ ಉತ್ತರ ನೀಡಿದರು. ಹರಸಿಕೊಂಡ ಪ್ರಾಣಿಗಳನ್ನು ಏನು ಮಾಡಬೇಕು ? ಎಂದು ಗ್ರಾಮಸ್ಥರು ಕೇಳಿದಾಗ ದೇವಿಗೆ ಬರೀ ಪೂಜೆ ಮಾಡಿಸಿ, ಪ್ರಾಣಿಗಳನ್ನು ನೀವೇ ಇಟ್ಟುಕೊಳ್ಳಿರಿ. ಒಂದು ವೇಳೆ ಇಟ್ಟುಕೊಂಡು ಉಪಯೋಗಿಸಲು ಇಷ್ಟವಿಲ್ಲದಿದ್ದರೆ ಪ್ರಾಣಿ ದಯಾಸಂಘದವರು ಕೊಂಡುಕೊಂಡು ಸಾಕುವರು." ಎಂಬುದಾಗಿ ವಿವಿಧ ಸಂಘಟನೆಗಳವರು ಹೇಳಿದರು. ಗ್ರಾಮಸ್ಥರು ಒಪ್ಪಿಕೊಂಡು ಪ್ರತಿಭಟನಕಾರರನ್ನು ಪೂಜೆಗೆ ಆಹ್ವಾನಿಸಿದರು, ನಾಟಕೀಯವಾಗಿ ನಡೆದ ಈ ಪ್ರಸಂಗವು ಸುಖಾಂತ್ಯವಾಯಿತು. ಅಂದು ಆಗಬಹುದಾಗಿದ್ದ ಅಸಂಖ್ಯಾತ ಪ್ರಾಣಿಗಳ ವಧೆ ತಪ್ಪಿ ಹೋಯಿತು.

ಶಾಶ್ವತವಾದ ಒಂದು ಯೋಜನೆ

ಸುಸಂಸ್ಕೃತವೂ, ತಾತ್ತ್ವಿಕವೂ ಆದ ಧರ್ಮದ ಕಲ್ಪನೆ ಮೂಡುವ ಪೂರ್ವದಲ್ಲಿ ಹುಟ್ಟಿದ ಕೆಲವು ಅಮಾನುಷ, ಆದಿ ಮಾನವನ ಆಚರಣೆಗಳು ಹಾಗೆಯೇ ಉಳಿದು ಬಂದಿದ್ದು, ಇವು ತೊಲಗದೆ ಇದ್ದರೆ ಧರ್ಮದ ಪಾವಿತ್ರ್ಯತೆಗೆ ಚ್ಯುತಿ ತರುತ್ತವೆ. ದೇವರ ಬಗ್ಗೆ ತಪ್ಪುಕಲ್ಪನೆ, ಜಿಗುಪ್ಸೆ ಹುಟ್ಟಿಸುತ್ತವೆ. ದೇವರು ದಯಾಮಯಿ, ಕಾರುಣ್ಯನಿಧಿ, ಪ್ರೇಮದ ಸಾಕಾರ, ಇಂಥ ದೇವರು ರಕ್ತದಾಹಿಯಾಗಿ ರಕ್ತದ ಅಭಿಷೇಕ, ಮಾಂಸದ ನೈವೇದ್ಯ ಬೇಡುವನೆ ? ಪರಮಾತ್ಮನೇ ಸೃಷ್ಟಿಸಿರುವ ಪ್ರಾಣಿಗಳು ದೇವರಿಗೆ ಮಕ್ಕಳಿದ್ದಂತೆಯೆ. ತಮ್ಮ ಮಕ್ಕಳ ರಕ್ತ-ಮಾಂಸಗಳನ್ನು ಹೇಗೆ ಹೆತ್ತ ತಾಯಿ ತಂದೆ ಬಯಸುವುದಿಲ್ಲವೋ ಹಾಗೆ ದೇವರೂ ಬಯಸಲಾರ, ಇನ್ನೊಂದು ವಿಪರ್ಯಾಸವೆಂದರೆ ಸ್ತ್ರೀ ದೇವತೆಗಳಾದ ಮಾರಿ, ದುರ್ಗಿ, ಮುಂತಾದುವುಗಳಿಗೆ ಬಲಿಕೊಡುವುದು. ಹೆಣ್ಣು ಅಂತಃಕರಣಶೀಲೆ, ಮಾನವೀಯತೆ-ಮಮತೆ-ಕರುಣೆ ಇವುಗಳ ಸಂಗಮ. ಹೆಣ್ಣು ದೇವತೆಗೆ ಬಲಿಕೊಡುವುದಂತೂ ಹೆಣ್ಣು ಜಾತಿ ರಕ್ತಪಿಪಾಸು ಎಂದು ಅಪ್ರತ್ಯಕ್ಷವಾಗಿ ಸಾರಿ ಇಡೀ ಮಹಿಳಾ ಕುಲಕ್ಕೆ ಅಪಮಾನ ಮಾಡುತ್ತದೆ.

ಪ್ರಸ್ತುತ ಪ್ರಸಂಗದಲ್ಲಿ ಜಿಲ್ಲಾಧಿಕಾರಿ, ವರಿಷ್ಠ ಜಿಲ್ಲಾ ಪೋಲೀಸ್ ಅಧಿಕಾರಿ ಮತ್ತವರ ಸಿಬ್ಬಂದಿಯ ಕಾರ್ಯ, ತಾಳ್ಮೆ ಶ್ಲಾಘನೀಯ. ಸರ್ಕಾರಿ ಅಧಿಕಾರಿಗಳು ಅವರ ಬೆಂಬಲಕ್ಕಿರುವ ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ 1959 ಅನ್ನು ಬಳಸಿ, ಅಲ್ಲಲ್ಲೇ ನಡೆಯುವ ಇಂಥ ಕ್ರೂರ ಆಚರಣೆಗಳನ್ನು ನಿಲ್ಲಿಸಿದರೆ ಮಹದುಪಕಾರವಾಗುವುದು. ವಿಲಿಯಂ ಬೆಂಟಿಕ್, ರಾಜಾರಾಮ ಮೋಹನರಾಯ್ ಅವರಂಥ ಸುಧಾರಕರು ದಿಟ್ಟ ಹೆಜ್ಜೆ ಇಟ್ಟಿದ್ದರಿಂದಲೇ ಸತಿ ಸಹಗಮನವು ಸಮಾಜದಿಂದ ತೊಲಗಿತು. ಅಹಿಂ

ಸಾವಾದದ ಪ್ರತಿಪಾದಕರಾದ ಬುದ್ಧ, ಮಹಾವೀರ, ಬಸವಣ್ಣ ಮುಂತಾದವರ ಮಾತುಗಳು ಅನಕ್ಷರಸ್ಥರು, ಮೂಢರೂ ಆದ ಜನರನ್ನು ತಲುಪುತ್ತಿಲ್ಲ ಎಂಬುದು ಒಂದು ಕಾರಣವಾದರೆ ಧೂರ್ತರು, ಸ್ವಾರ್ಥಿಗಳು ಸ್ವಹಿತಾಸಕ್ತರು ತಲುಪಲು ಬಿಡುವುದಿಲ್ಲ ಎಂಬುದು ಇನ್ನೊಂದು ಕಾರಣ. ಹೀಗಾಗಿ ಇಂಥ ಮೂಢ ಆಚರಣೆ ಎಗ್ಗಿಲ್ಲದೆ ಸಾಗಿ ಬಂದಿವೆ. ಧಾರ್ಮಿಕ ನೀತಿಯನ್ನು ಧರ್ಮಾಧಿಕಾರಿಗಳು, ಧಾರ್ಮಿಕ ಸಂಸ್ಥೆಗಳು, ಮಠ-ಮಾನ್ಯಗಳು ಜನತೆಯಲ್ಲಿ ಬೋಧಿಸುತ್ತ ಜನರ ನಂಬುಗೆ-ಆಚರಣೆಗಳಲ್ಲಿ ಪರಿವರ್ತನೆ ತರುವ ಕಾಲ ಸನ್ನಿಹಿತವಾಗಿದೆ. ಅಂದು ಆ ಸುಧಾರಕರು ಸಮಾಜದಲ್ಲಿ ಪರಿವರ್ತನೆ ತರುವಾಗ ಅವರು ಮೂಢ ಜನರ ವಿರುದ್ಧ ಮಾತ್ರವಲ್ಲ ರಾಜಶಾಹಿಯೊಡನೆ ಸೆಣಸಬೇಕಾಗಿತ್ತು. ಏಕೆಂದರೆ ರಾಜರುಗಳೇ ಇಂಥವನ್ನೆಲ್ಲ ಪೋಷಿಸುತ್ತಿದ್ದರು. ಇಂದು ರಾಜಶಾಹಿ ಇಲ್ಲ, ಮಾತ್ರವಲ್ಲ ಸರ್ಕಾರವೇ ಹಲವಾರು ಕಾಯಿದೆಗಳನ್ನು ರೂಪಿಸಿದೆ, ಪ್ರತಿಭಟನೆ ಮಾಡುವ ಹೋರಾಟಗಾರರಿಗೆ ರಕ್ಷಣೆ ನೀಡುತ್ತದೆ. ಧರ್ಮವಂತನ ಕರ್ತವ್ಯ ಪೂರ್ಣಗೊಳ್ಳಬೇಕಾದರೆ ಅವನು ತಾನಷ್ಟೆ ಆಚರಣೆ ಮಾಡಿದರಲ್ಲ, ಧರ್ಮವನ್ನು ಉಳಿಸಿಕೊಳ್ಳಲು ಮತ್ತು ಶುದ್ಧೀಕರಣ ಮಾಡಲು ಕಂಕಣ ಬದ್ಧನಾಗಬೇಕು. ದೊಡ್ಡರಾಮಾಪುರದಲ್ಲಿ ಅಕ್ಟೋಬರ್ 30 ರಂದು ದೊರೆತ ಯಶಸ್ಸು ಮೂಢಾಚರಣೆಗಳಿಂದ ಧರ್ಮವನ್ನು ರಕ್ಷಿಸಲು ಸಾಧ್ಯ ಎಂಬ ಭಾವ ಹುಟ್ಟಿಸುವ ಆಶಾಕಿರಣವಾಗಿದೆ. ಆಂಧ್ರ ಪ್ರದೇಶದ ರುದ್ರಾರಾಮ ಎಂಬಲ್ಲಿ ಅರಬ್ ದೇಶದ ಅಲ್ ಕಬೀರ್ ಸಂಸ್ಥೆಯು ಭಾರತದಿಂದ ಮಾಂಸವನ್ನು ರಫ್ತು ಮಾಡಲು ಸ್ಥಾಪಿಸುತ್ತಿರುವ ಯಾಂತ್ರೀಕೃತ ಕಸಾಯಿ ಖಾನೆಯನಿರ್ಮಾಣವನ್ನು ವಿರೋಧಿಸಲು ಪ್ರೇರಣೆಯನ್ನು ನೀಡಿದೆ. ❋

ಸಂಪರ್ಕಿಸುವ ವಿಳಾಸ

ದೊಡ್ಡರಾಮಾಪುರದಲ್ಲಿ ಅಕ್ಟೋಬರ್ 2 ರಂದು ನಡೆದ ಬೃಹತ್ ಪ್ರಾಣಿವಧೆ ಒಂದು ಸಣ್ಣ ಪ್ರಸಂಗ. ಇದನ್ನೂ ಮೀರಿಸುವಷ್ಟು ಪ್ರಮಾಣದ ವಧೆಗಳು ಅಲ್ಲಲ್ಲೇ ನಡೆಯುತ್ತಿವೆ. ಆದ್ದರಿಂದ ವಿಚಾರಶೀಲರಾದ ಜನರು ಆದಷ್ಟು ಬೇಗನೆ ಅಂಥ ಬಲಿಗಳ ವಿವರಗಳನ್ನು ಮತ್ತು ಅವು ನಡೆಯುವ ದಿನಾಂಕಗಳನ್ನು ಕೆಳಗಿನ ವಿಳಾಸಗಳಿಗೆ ಪತ್ರ ಮುಖೇನ ತಿಳಿಸಿದರೆ, ಬಲಿ ನಡೆಯುವ ಸುತ್ತಲಿನ ಊರುಗಳಲ್ಲಿ ಪ್ರವಚನಗಳನ್ನು ಏರ್ಪಡಿಸಿ ಜನರಿಗೆ ಧರ್ಮೋಪದೇಶ ಮಾಡಿಸಲಾಗುವುದಲ್ಲದೆ ಪ್ರತಿಭಟಿಸುವ ಸ್ವಯಂ ಸೇವಕರ ತಂಡಗಳನ್ನು ರಚಿಸಲಾಗುವುದು. ಸ್ಥಳೀಯ ಸಮಸ್ಯೆಗಳ ಕಾರಣದಿಂದ ತಮ್ಮ ಹೆಸರನ್ನು ಬಹಿರಂಗ ಪಡಿಸಬಾರದೆಂದರೆ ವಿವರ ನೀಡಿದವರ ಹೆಸರನ್ನು ಗುಟ್ಟಾಗಿ ಇಡಲಾಗುವುದು.

1. **ರಾಷ್ಟ್ರೀಯ ಬಸವ ದಳ,** ಬಸವ ಮಂಟಪ, 2035, ಎರಡನೆ ಬ್ಲಾಕು, 20 ನೆಯ ಮೇಯಿನ್, ರಾಜಾಜಿನಗರ. ಬೆಂಗಳೂರು–560010, ದೂರವಾಣಿ : 325335

2. ಅಖಿಲ ಕರ್ನಾಟಕ ಪ್ರಾಣಿದಯಾಸಂಘ, ಟ್ಯಾಂಕ್ ಬಂಡ್, 80 ಅಡಿ ರಸ್ತೆ, 6ನೇ ಬ್ಲಾಕು, ಕೋರಮಂಗಲ, ಬೆಂಗಳೂರು--34, ದೂರವಾಣಿ : 532204, 648527
3. ಶ್ರೀ ಅರಿಹಂತ ಜೈನ್ ಪ್ರಾಣಿ ಕಲ್ಯಾಣ ಸಂಸ್ಥಾ, 84, ಬಿ.ವಿ.ಕೆ, ಐಯ್ಯಂಗಾರ್ ರಸ್ತೆ, ಬೆಂಗಳೂರು-560053. ದೂರವಾಣಿ : 76224, 74067. ಈ ಮೂರೂ ಸಂಸ್ಥೆಗಳ ಸಂಯುಕ್ತ ಹೋರಾಟದ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ರಾಷ್ಟ್ರೀಯ ಬಸವ ದಳವು ಬಸವ ಧರ್ಮ ಪೀಠದ ಕಾರ್ಯಾಂಗ ; ಕೂಡಲ ಸಂಗಮದಲ್ಲಿ ಕೇಂದ್ರ ಕಾರ್ಯಾಲಯವನ್ನು ಹೊಂದಿದ್ದು ಕರ್ನಾಟಕದ ವಿವಿಧ ಜಿಲ್ಲೆ, ತಾಲ್ಲೋಕು, ಗ್ರಾಮಗಳಲ್ಲಿ ಮಾತ್ರವಲ್ಲ ಹೊರರಾಜ್ಯಗಳಲ್ಲೂ ಶಾಖೆಗಳನ್ನು ಹೊಂದಿದೆ. ಧರ್ಮಪ್ರಜ್ಞೆ-ರಾಷ್ಟ್ರನಿಷ್ಠೆಗಳನ್ನು ಜನರಲ್ಲಿ ಮೂಡಿಸುವ ತರಬೇತಿಯನ್ನು ಈ ಸಂಸ್ಥೆ ನೀಡಲು ವರ್ಷಕ್ಕೆರಡು ಬಾರಿ ತರಬೇತಿ ಶಿಬಿರಗಳನ್ನು ನಡೆಸುತ್ತದೆ. ಇದರ ಮುಖ್ಯ ಧ್ಯೇಯ ಸಮಾಜ ಶುದ್ಧೀಕರಣ, ಜಾತಿ ವರ್ಣ ವರ್ಗ ರಹಿತ, ಧರ್ಮ ಸಹಿತ ಸಮಾಜ ನಿರ್ಮಾಣ.

ಲೇಖಕರು :

❋ **ನಿಜಗುಣಾನಂದ ಸ್ವಾಮಿ,** ಬಸವ ಮಂಟಪ, 2035 ಎರಡನೆ ಬ್ಲಾಕು, 20ನೆಯ ಮೇಯಿನ್, ರಾಜಾಜಿನಗರ, ಬೆಂಗಳೂರು-560 010

ಕರ್ತವ್ಯ

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥

ಓಂ ಶ್ರೀಗುರು ಬಸವಲಿಂಗಾಯ ನಮಃ

ಭಾವ ಸಂಗಮ

(ವಧು-ವರ ಹೊಂದಾಣಿಕೆ ಕೇಂದ್ರ)

ರಾಷ್ಟ್ರೀಯ ಬಸವದಳ, ಬಸವ ಮಂಟಪ

ರಾಜಾಜಿನಗರ, ಬೆಂಗಳೂರು - 560 010

ಶರಣ ಬಂಧುಗಳೇ,

ಬೆಂಗಳೂರು ನಗರದ ರಾಷ್ಟ್ರೀಯ ಬಸವ ದಳದ ಸದಸ್ಯರು **'ಭಾವ ಸಂಗಮ'** ಎಂಬ ವಧುವರರ ಹೊಂದಾಣಿಕೆ ಕೇಂದ್ರವೊಂದನ್ನು ಆರಂಭಿಸಿದ್ದೇವೆ. ಬಸವ ತತ್ತ್ವಾನುಯಾಯಿಗಳಾದ ಲಿಂಗವಂತ ಧರ್ಮೀಯರು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಾತ್ರವಲ್ಲ, ಹೊರರಾಜ್ಯಗಳಲ್ಲಿ ಹೊರರಾಷ್ಟ್ರಗಳಲ್ಲಿ ಸಹ ಹರಿದು ಹಂಚಿಹೋಗಿದ್ದಾರೆ. ಪರಸ್ಪರ ಸಂಪರ್ಕದ ಕೊರತೆಯಿಂದಾಗಿ ವಿವಾಹ ಸಂಬಂಧಗಳನ್ನು ಏರ್ಪಡಿಸುವುದು ಕಷ್ಟಕರವಾಗಿದೆ. ಸಮಯ, ಹಣ, ಪ್ರಯಾಣದ ಪರಿಶ್ರಮಗಳನ್ನು ಉಳಿಸಲೋಸುಗ 'ಭಾವ ಸಂಗಮ'ವು ರೂಪುಗೊಂಡಿದೆ. 5 ರೂ. ಗಳನ್ನು ಕಳಿಸಿ, ಇದಕ್ಕೆ ಸಂಬಂಧಿಸಿದ ಅರ್ಜಿ ಪತ್ರಗಳನ್ನು ತರಿಸಿಕೊಂಡು, ಅದರಲ್ಲಿ ವಿವರಗಳನ್ನು ತುಂಬಿ ನೋಂದಾವಣೆ ಶುಲ್ಕ 50 ರೂ. ಗಳೊಡನೆ ಅರ್ಜಿ ಪತ್ರವನ್ನು ಕಳಿಸಬೇಕು. ರಸೀತಿಯೊಡನೆ ನಿಮಗೆ ಒಂದು ಕ್ರಮ ಸಂಖ್ಯೆ ಕೊಡಲಾಗುವುದು ಮತ್ತು ಸೂಕ್ತವೆನಿಸಿದ ವಧು / ವರನ ವಿವರಗಳನ್ನು ಕಳಿಸಲಾಗುವುದು.

ಭೇಟಿಯ ಸಮಯ : ಪ್ರತಿ ದಿನವೂ ಬೆಳಿಗ್ಗೆ 10 ರಿಂದ 12 ಗಂಟೆ
ಸಂಜೆ 5 ರಿಂದ 7 ಗಂಟೆ.

ಜನರಿಂದ ಈ ಸದವಕಾಶವನ್ನು ಉಪಯೋಗಿಸಿಕೊಳ್ಳುವುದರಲ್ಲಿ ಹೆಚ್ಚಿನ ಉತ್ಸಾಹ ಕಂಡು ಬಂದರೆ, ವರ್ಷದಲ್ಲಿ ಹಲವು ಬಾರಿ ಸಮಾವೇಶಗಳನ್ನು ಏರ್ಪಡಿಸಿ, ವಧು-ವರರನ್ನು ಮತ್ತು ಅವರ ಪಾಲಕರನ್ನು ಆಹ್ವಾನಿಸಲಾಗುವುದು.

— ಶರಣು - ಶರಣಾರ್ಥಿಗಳೊಡನೆ —

ಶರಣೆ ದೇವಿಕಾ ಹೆಚ್.ಎ. ಶರಣಪ್ಪ — **ಶರಣ ಎನ್. ಪುಟ್ಟರುದ್ರಪ್ಪ**
ಶರಣೆ ಪಾರ್ವತಿ ಡಾ|| ಸಿ. ವಿ. ಶಿರೋಳ — **ಶರಣ ಕೊಂಡಜ್ಜಿ ಬಸಪ್ಪ**
ಶರಣೆ ಜಯಮ್ಮ ಶೇಖರಪ್ಪ — **ಶರಣ ಶಿವರುದ್ರೇಗೌಡ**

ವ್ಯವಹರಿಸುವ ವಿಳಾಸ :

ದೂರವಾಣಿ : 325335

"ಭಾವ ಸಂಗಮ" ವಧುವರ ಹೊಂದಾಣಿಕೆ ಕೇಂದ್ರ
ಬಸವ ಮಂಟಪ, 2035, 2ನೇ ಬ್ಲಾಕು
20ನೇ ಮೆಯಿನ್ ರಸ್ತೆ, ರಾಜಾಜಿನಗರ, ಬೆಂಗಳೂರು-560010, ಕರ್ನಾಟಕ ರಾಜ್ಯ

|| ಓಂ ಶ್ರೀ ಗುರುಬಸವ ಲಿಂಗಾಯ ನಮಃ ||

1992 ನೇ ಸಾಲಿನ ಹಬ್ಬ-ಹುಣ್ಣಿಮೆಗಳು-ಜನ್ಮ ದಿನೋತ್ಸವಗಳು

1.	ಬಸವಕ್ರಾಂತಿ ದಿನದ ಅಂಗವಾಗಿ ಶರಣ ಮೇಳ.	ಜನವರಿ 12 ರಿಂದ
2.	ಸಿದ್ಧರಾಮೇಶ್ವರ ಜಯಂತಿ ★	" 15
3.	ಗಣರಾಜ್ಯೋತ್ಸವ ದಿನ ★	ಜನವರಿ 26
4.	ಚನ್ನಹುಣ್ಣಿಮೆ (ಉಳವಿ ಜಾತ್ರೆ)	ಫೆಬ್ರುವರಿ 18
5.	ಸರ್ವಶರಣರ ದಿನಾಚರಣೆ (ಶಿವರಾತ್ರಿ) ★	ಮಾರ್ಚಿ 2
6.	ಪೂಜ್ಯ ಮಾತಾಜಿಯವರ ವರ್ಧಂತಿ	ಮಾರ್ಚಿ 13
7.	ಅಲ್ಲಮಪ್ರಭು ಜಯಂತಿ (ಯುಗಾದಿ) ★	ಏಪ್ರಿಲ್ 4
8.	ಅಕ್ಕಮಹಾದೇವಿ ಜಯಂತಿ ★	ಏಪ್ರಿಲ್ 17
9.	ಮಡಿವಾಳ ಮಾಚಿದೇವ ಜಯಂತಿ ಮತ್ತು ಕಾಯಕ ದಿನಾಚರಣೆ ★	ಮೇ 1
10.	ಬಸವ ಜಯಂತಿ ★	ಮೇ 5
11.	ಬಸವ ಪಂಚಮಿ (ಬಸವ ಲಿಂಗೈಕ್ಯದಿನ)	ಆಗಸ್ಟ್ 3
12.	ನೀಲಮ್ಮ ಷಷ್ಠಿ	" 4
13.	ಸ್ವಾತಂತ್ರ್ಯ ದಿನೋತ್ಸವ ★	" 15
14.	ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಗುರುಗಳ ವರ್ಧಂತಿ ★	" 31
15.	ಗಾಂಧೀ ಜಯಂತಿ ★	ಅಕ್ಟೋಬರ್ 2
16.	ಕಲ್ಯಾಣ ಕ್ರಾಂತಿ ದಿನ (ಮಹಾನವಮಿ) ★	ಅಕ್ಟೋಬರ್ 5
17.	ಬಸವ ಧರ್ಮ ವಿಜಯೋತ್ಸವ (ವಿಜಯದಶಮಿ) ★ ಅಕ್ಕನಾಗಲಾಂಬಿಕಾ ಸಂಸ್ಮರಣಾ ದಿನ	" 6
18.	ಚನ್ನಬಸವ ಜಯಂತಿ (ಕಾರ್ತೀಕ ಪ್ರತಿಪದೆ) ★	" 26

★ ಸರ್ಕಾರಿ ರಜಾದಿನಗಳು

ಪ್ರಕಟಣೆ :

ಬಸವ ಧರ್ಮ ಪೀಠ (ರಿ.)
ಮಹಾಮನೆ ಮಹಾಮಠ
ಕೂಡಲ ಸಂಗಮ-587115
ತಾ-ಹುನಗುಂದ, ಜಿಲ್ಲೆ-ಬಿಜಾಪುರ

॥ಓಂ ಶ್ರೀ ಗುರುಬಸವಲಿಂಗಾಯ ನಮಃ॥

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

೧. ಧರ್ಮ ಗುರು–

ಮಂತ್ರಪುರುಷ, ಮೋಕ್ಷದಾಯಕ, ಶರಣಾಗತ ರಕ್ಷಕ

ವಿಶ್ವಗುರು ಬಸವಣ್ಣನವರು

೨. ಧರ್ಮ ಸಂಹಿತೆ–

ಮಾನವ ಕುಲದ ಸ್ವಾತಂತ್ರ್ಯ–ಸಮಾನತೆ ಸಾರುವ

ವಚನ ಸಾಹಿತ್ಯ

೩. ಧರ್ಮ ಲಾಂಛನ–

ವಿಶ್ವಾತ್ಮನ ಕುರುಹಾದ, ವಿಶ್ವದಾಕಾರವಾದ

ಗೋಳಾಕಾರದಲ್ಲಿರುವ **ಇಷ್ಟಲಿಂಗ**

೪. ಧರ್ಮ ಕ್ಷೇತ್ರ–

ವಿಶ್ವಗುರು ಬಸವಣ್ಣನವರ ಐಕ್ಯಕ್ಷೇತ್ರವಾದ

ಕೂಡಲ ಸಂಗಮ

೫. ಧರ್ಮ ಧ್ವಜ–

ಬಸವ ಮಂತ್ರ ಸಹಿತವಾದ ಷಟ್ಕೋನಗಳುಳ್ಳ

ಬಸವ ಧ್ವಜ

೬. ಧರ್ಮದ ಧ್ಯೇಯು–

ಜಾತಿವರ್ಣವರ್ಗರಹಿತ ಕಲ್ಯಾಣ ರಾಜ್ಯ ನಿರ್ಮಾಣ.

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.

ಬಸವ – ಕಿರಣ

"ಕಲ್ಯಾಣ ಕಿರಣ" ವಿಶೇಷ ಸಂಚಿಕೆ

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರವಾದ ಕೂಡಲ ಸಂಗಮದಲ್ಲಿ 1992ರ ಜನವರಿ 12, 13, 14 ಮತ್ತು 15 ರಂದು ಐದನೆಯ ಬೃಹತ್ ಶರಣ ಮೇಳವು ನಡೆಯಲಿದ್ದು, ಬಸವ ಭಕ್ತರು, ಬಸವ ತತ್ವಾಭಿಮಾನಿಗಳು ಲಕ್ಷಗಟ್ಟಳೆ ಸಂಖ್ಯೆಯಲ್ಲಿ ನೆರೆದು, ಸಮುದಾಯ ಪ್ರಾರ್ಥನೆ, ಸಾಮೂಹಿಕ ಪೂಜೆಗಳಲ್ಲಿ ಭಾಗವಹಿಸಲಿದ್ದಾರೆ. ಬಸವ ಧರ್ಮ ಪೀಠವು ಸ್ಥಾಪನೆಯಾಗಲಿದ್ದು, ಪೂಜ್ಯ ಶ್ರೀ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಪ್ರಥಮ ಅಧಿಕಾರಿಗಳಾಗಿ ಗದ್ದುಗೆ ಏರಲಿದ್ದಾರೆ. ಈ ಕಾರ್ಯಕ್ರಮಕ್ಕೆ ಅಸಂಖ್ಯಾತ ಅಭಿಮಾನಿಗಳು ಸಮಾವೇಶವಾಗಲಿದ್ದಾರೆ. ಇಂತಹ ಮಹತ್ವಪೂರ್ಣ ಸನ್ನಿವೇಶದಲ್ಲಿ ಆಫ್‌ಸೆಟ್ ವರ್ಣ ರಂಜಿತ ಚಿತ್ರಗಳೊಡನೆ, ಉತ್ತಮ ಹಾಗೂ ಮಹತ್ವಪೂರ್ಣ ಲೇಖನಗಳೊಡನೆ ಶರಣ ಮೇಳದ ವಿಶೇಷ ಚಿತ್ರಗಳೊಡನೆ "ಬಸವ–ಕಿರಣ" ಎಂಬ ವಿಶೇಷ ಸಂಚಿಕೆಯನ್ನು "ಕಲ್ಯಾಣ ಕಿರಣ" ಮಾಸ ಪತ್ರಿಕೆಯು ಹೊರತರಲಿದೆ. ಬಸವ–ಕಿರಣವು ಸಂಗ್ರಹ ಯೋಗ್ಯ ಕೃತಿಯಾಗಲಿದೆ. ಹತ್ತುಸಾವಿರ ಪ್ರತಿಗಳು ಮುದ್ರಣಗೊಳ್ಳುವ ಈ ವಿಶೇಷ ಸಂಚಿಕೆಯ ಜಾಹಿರಾತು ದರಗಳು ಕೆಳಗಿನಂತಿವೆ.

ವಿಶೇಷ ಸಂಚಿಕೆಯ ಆಕಾರ

ಪೂರ್ಣ ಪುಟ : 19 ಸೆಂ. ಮೀ. x 12 ಸೆಂ. ಮೀ. (1/8 ಡೆಮ್ಮಿ)

ಅರ್ಧ ಪುಟ : 12 ಸೆಂ. ಮೀ. x 9½ ಸೆಂ. ಮೀ.

ವಿಶೇಷ ಸಂಚಿಕೆಯ ರಕ್ಷಾ ಕವಚ (ಆಫ್ ಸೆಟ್‌ವರ್ಣಗಳಲ್ಲಿ)

4 ನೆಯ ಪುಟ : 3000 ರೂ.

2 ಮತ್ತು 3 ನೆಯ ಪುಟಗಳು : 2000 ರೂ.

ವಿಶೇಷ ಪುಟಗಳು : 1000 ರೂ.

ಒಳ ಪುಟಗಳು-ಒಂದು ಪೂರ್ಣ ಪುಟ : 500 ರೂ. ಅರ್ಧ ಪುಟ: 300 ರೂ.

ವಿ. ಸೂ. : ಅರ್ಧ ಪುಟಕ್ಕಿಂತಲೂ ಕಮ್ಮಿಯಾದ ಜಾಹಿರಾತು ಸ್ವೀಕರಿಸುವುದಿಲ್ಲ. ಜಾಹಿರಾತುಗಳ ಪೂರ್ಣ ವಿವರಗಳು ಪೂರ್ಣಮೊತ್ತದೊಡನೆ 20-12-91ರ ಮುಂಚೆ ಕೈಸೇರುವಂತಾಗಬೇಕು.

ಬ್ಯಾಂಕ್ ಡ್ರಾಫ್ಟ್ ಮತ್ತು ಚೆಕ್ಕುಗಳನ್ನು ಕಳಿಸುವವರು "ಕಲ್ಯಾಣ ಕಿರಣ, ಬೆಂಗಳೂರು" ಎಂಬ ಹೆಸರಿನಲ್ಲಿ ಕೆಳಗಿನ ವಿಳಾಸಕ್ಕೆ ಕಳಿಸಬೇಕು.

ಸ್ವಯಂ ಇಚ್ಛೆಯ ಕಾಣಿಕೆ ಕಳಿಸುವವರೂ ಕಳಿಸಬಹುದು.

ಕಲ್ಯಾಣ ಕಿರಣ, ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, 20 ನೆಯ ಮುಖ್ಯ ರಸ್ತೆ, 2ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು–560010

ಕಲ್ಯಾಣ ಕಿರಣ KRNB 312/BGW 92 NOVEMBER 1991

ಕ್ರಾಂತಿ ಕವಿ ಸರ್ವಜ್ಞ

